06 ಅಗಸ್ಟ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 148 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಹಾಗೂ ಫಿಲಿಪ್ಪೀನ್ಸ್ ಸ್ನೇಹಿತರಾಗಿದ್ದು, ಪಾಲುದಾರ ರಾಷ್ಟ್ರಗಳಾಗಿವೆ. ಉಭಯ ರಾಷ್ಟ್ರಗಳು ಬಾಂಧವ್ಯದ ಪಾಲುದಾರಿಕೆಯನ್ನು ಇನ್ನಷ್ಟು ಹೆಚ್ಚಿಸಲು ನಿರ್ಧರಿಸಿದ್ದು, ಸೇನಾಪಡೆಗಳ ನಡುವಿನ ಸಹಭಾಗಿತ್ವಕ್ಕೂ ಆದ್ಯತೆ ನೀಡಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.




ಮನುಕುಲದ ಮೇಲೆ ಮಾಯದ ಗಾಯ ಮೂಡಿಸಿದ ದಿನ » 2



ಸಾರಿಗೆ ಮುಷ್ಕರ : ಖಾಸಗಿ ಬಸ್‌ಗಳತ್ತ ಜನರ ಚಿತ್ತ » 3



2026ರ ಮಾರ್ಚ್ ಒಳಗೆ 1 ಕೋಟಿ ಪುಟ ಗಣಕೀಕರಣ » 4


# ಹೈಕೋರ್ಟ್ ಛೀಮಾರಿ: ರಸ್ತೆಗಿಳಿದ ಬಸ್‌ಗಳು

## ಮುಷ್ಕರ ಮುಂದುವರೆಸಿದರೆ ನ್ಯಾಯಾಂಗ ನಿಂದನೆ ಪ್ರಕರಣ | ಬಂಧನದ ಎಚ್ಚರಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಸಾರಿಗೆ ನಿಗಮಗಳ ನೌಕರರ ಮುಷ್ಕರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದ ಬೆನ್ನಲ್ಲೇ ಸಾರಿಗೆ ನೌಕರರು ಮುಷ್ಕರ ವಾಪಾಸ್ ಪಡೆದು ಮಂಗಳವಾರ ಸಂಜೆಯೇ ಬಸ್‌ಗಳನ್ನು ರಸ್ತೆಗಿಳಿಸಿದರು.

ಸಾರಿಗೆ ನೌಕರರ ಮುಷ್ಕರ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ನಡೆಸಿದ ಹೈಕೋರ್ಟ್ ಮುಖ್ಯ ನಾಯ್ಯಮೂರ್ತಿ ವಿಭು ಬಕ್ರು, ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರ ವಿಭಾಗೀಯ ಪೀಠ, ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ(ಜೆಎಸಿ)ಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು.

ಹೈಕೋರ್ಟ್ ಮುಷ್ಕರ ನಡೆಸಬಾರದೆಂದು ಆದೇಶ ನೀಡಿದ್ದರೂ, ನೀವು ಅದನ್ನು ಪಾಲಿಸಿಲ್ಲ. ಎಸ್ಮಾ (ಅಗತ್ಯ ಸೇವೆ ನಿರ್ವಹಣೆ ಕಾಯ್ದೆ -1968) ಜಾರಿಯಾಗಿದ್ದರೂ ಮುಷ್ಕರ ನಡೆಸುವುದು ಕಾನೂನು ಬಾಹಿರ. ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿ, ಎಸ್ಮಾ ಕಾಯ್ದೆಯಡಿ ಸಂಘ ಟನೆಯ ಪದಾಧಿಕಾರಿಗಳನ್ನು ಬಂಧಿಸಬಹುದು. ಮುಷ್ಕರ ನಿಂತಿರುವ ಬಗ್ಗೆ ಬುಧವಾರ ಮಾಹಿತಿ ನೀಡಬೇಕೆಂದು ಹೈಕೋರ್ಟ್, ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಪರ ವಕೀಲರಿಗೆ ಸೂಚಿಸಿತು. ಅದಕ್ಕೆ ಉತ್ತರಿಸಿದ ನೌಕರರ ಸಂಘಟನೆ ಪರ ವಕೀಲರು, ಮುಷ್ಕರ ನಡೆಸುವುದಿಲ್ಲ ಎಂದು ಹೇಳಿದರು.



### ಈ ಕ್ಷಣವೇ ಕರ್ತವ್ಯಕ್ಕೆ ಹಾಜರಾಗಿ

ಹೈಕೋರ್ಟ್ ಎಚ್ಚರಿಕೆ ಬೆನ್ನಲ್ಲೇ ಸುದ್ದಿಗೋಷ್ಠಿ ನಡೆಸಿದ ಜೆಎಸಿ ಅಧ್ಯಕ್ಷ ಹೆಚ್.ವಿ.ಅನಂತ ಸುಬ್ಬರಾವ್ ಅವರು, ಸಾರಿಗೆ ನೌಕರರ ಅನಿರ್ಧಿಷ್ಟಾವಧಿ ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಎಲ್ಲಾ ಸಾರಿಗೆ ನೌಕರರು ಕರ್ತವ್ಯಕ್ಕೆ ಹಾಜರಾಗಿ. ಈ ಕ್ಷಣದಿಂದಲೇ ನೌಕರರು ಕರ್ತವ್ಯಕ್ಕೆ ಹಾಜರಾಗಬೇಕೆಂದು ಕರೆ ನೀಡಿದರು.

ಸರ್ಕಾರದ ಪರ ವಾದ ಮಂಡಿಸಿದ ಎಜಿ ಶಶಿಕಿರಣ್ ಶೆಟ್ಟಿ ಅವರು, ಈ ಮುಷ್ಕರದಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ ಎಂದು ಪೀಠಕ್ಕೆ ತಿಳಿಸಿದರು.

ಆ ನ್ಯಾಯಾಧೀಶರು, ನೀವು ನಡೆಸುತ್ತಿರುವ ಮುಷ್ಕರ ಕಾನೂನುಬಾಹಿರ. ನಿಮಗೆ ಸಮಸ್ಯೆಗಳಿದ್ದರೆ, ನೀವು ಸರ್ಕಾರದೊಂದಿಗೆ ಮಾತುಕತೆ ನಡೆಸಬಹುದು. ಸಾರ್ವಜನಿಕರಿಗೆ ತೊಂದರೆ ಕೊಡಲು ಸಾಧ್ಯವಿಲ್ಲ. ಆದರೆ ಒಕ್ಕೂಟಗಳು ಸಮಸ್ಯೆಯುಂಟು ಮಾಡುತ್ತಿದೆ, ಸಾರ್ವಜನಿಕರಿಗೆ ಈ ರೀತಿಯಲ್ಲಿ ಅನಾನುಕೂಲತೆ ಉಂಟು ಮಾಡುವುದು ಸರಿಯಲ್ಲ ಎಂದು ತಿಳಿಸಿದರು.

### ದಿನವಿಡೀ ಜನರ ಪರದಾಟ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ) ಮತ್ತು ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ(ಎನ್‌ಡಬ್ಲ್ಯೂಕೆಆರ್‌ಟಿಸಿ)ಯ ನೌಕರರು ಮಂಗಳವಾರ ಬೆಳಿಗ್ಗೆಯಿಂದಲೇ ಮುಷ್ಕರ ಆರಂಭಿಸಿದ್ದರಿಂದ ಬಸ್‌ಗಳು ರಸ್ತೆಗೆ ಇಳಿಯದ ಕಾರಣ ಸಾಮಾನ್ಯ ಜನಜೀವನ ಅಸ್ತವ್ಯಸ್ತ ಗೊಂಡಿತು. ಮುಷ್ಕರದಿಂದಾಗಿ ಬೆಂಗ ಳೂರು, ಮೈಸೂರು ಸೇರಿ ರಾಜ್ಯಾದ್ಯಂತ ಸಾವಿರಾರು ಪ್ರಯಾಣಿಕರು ಪರದಾಡು ವಂತಾಯಿತು. ಬಸ್‌ಗಳಿಲ್ಲದೆ ಜನರು ಖಾಸಗಿ ವಾಹನಗಳಲ್ಲಿ ಪ್ರಯಾಣಿಸಲು ಕೇಳಿದಷ್ಟು ಹಣ ನೀಡ ಬೇಕಾಯಿತು. ಸಾರಿಗೆ ಬಸ್‌ಗಳಿಲ್ಲದ ಕಾರಣ ಅನೇಕ ಮಹಿಳಾ ಪ್ರಯಾಣಿ ಕರು ತೀವ್ರ ತೊಂದರೆ ಅನುಭವಿಸಿದರು. ಹೈಕೋರ್ಟ್ ಸೂಚನೆಯಂತೆ ಬಸ್‌ಗಳು ಸಂಜೆ ವೇಳೆಗೆ ರಸ್ತೆಗಿಳಿಯುತ್ತಿದ್ದಂತೆ ಪ್ರಯಾಣಿಕರು ಸಮಾಧಾನ ಪಟ್ಟಿಕೊಂಡು.

ಬಳಿಕ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ತಡೆಯಾಜ್ಞೆ ನೀಡಿದ್ದ ಮಧ್ಯಂತರ ಆದೇಶವನ್ನು ವಿಸ್ತರಿ ಸಿದ ಹೈಕೋರ್ಟ್, ನ್ಯಾಯಾಲಯದ ಆದೇಶ ಉಲ್ಲಂಘಿಸಿ ಮುಷ್ಕರ ಮುಂದುವರಿಸಿದರೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿ, ವಿಚಾರಣೆಯನ್ನು ಆಗಸ್ಟ್ 7ಕ್ಕೆ ಮುಂದೂಡಿತು.

**ಬೇಡಿಕೆಗೆ ಬಗ್ಗದ ಸರ್ಕಾರ**

ವೇತನ ಹಿಂಬಾಕಿ, ಸಂಬಳ ಹೆಚ್ಚಳ ಸೇರಿ ನಾನಾ ಬೇಡಿಕೆ ಈಡೇರಿಸಲು ಆಗ್ರಹಿಸಿ ಕೆಎಸ್ ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. 1800 ಕೋಟಿ ಹಿಂಬಾಕಿ, ಕೋಟ್ಯಂತರ ರೂ. ಪಿಎಫ್ ಬಾಕಿ, ವೇತನ ಹೆಚ್ಚಳ ಸೇರಿ ಹತ್ತಾರು ಬೇಡಿಕೆ ಗಳನ್ನು ಸರ್ಕಾರದ ಮುಂದೆ ಇಡಲಾಗಿದೆ. ಆದರೆ ಹಿಂಬಾಕಿ ಕೊಡಲು ಸರ್ಕಾರ ಒಪ್ಪದಿದ್ದ ಕಾರಣ, ಸಭೆಯಲ್ಲಿ ಒಮ್ಮತದ ನಿರ್ಧಾರಕ್ಕೆ ಬಂದಿರಲಿಲ್ಲ. ಹೀಗಾಗಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಈ ಬೆನ್ನಲ್ಲೇ ನೌಕರರ ಮುಷ್ಕರವನ್ನು 1 ದಿನ ತಡೆ ಹಿಡಿಯುವಂತೆ ಹೈಕೋರ್ಟ್ ಸೂಚನೆ ನೀಡಿತ್ತು. ಆದರೆ, ಕೋರ್ಟ್ ಆದೇಶ ಪ್ರತಿ ಕೈಸೇರಿಲ್ಲ ಅಂತ ಹೇಳಿ ಜಂಟಿ ಕ್ರಿಯಾ ಸಮಿತಿ ಮುಷ್ಕರಕ್ಕೆ ಧುಮುಕಿತ್ತು. ಮುಷ್ಕರ ನಡೆದರು ಸರ್ಕಾರ ನೌಕರರ ಬೇಡಿಕೆಗೆ ಬಗ್ಗಿಲ್ಲ.

# ತೆಂಗು ಬೆಳೆಗೆ ರೋಗ: ವಿಶೇಷ ಪ್ಯಾಕೇಜ್‌ಗೆ ಸಂಸದರ ಮನವಿ

• ಪ್ರಜೋದಯ ವರದಿ

**ಹಾಸನ:** ಸಂಸದ ಶ್ರೇಯಸ್ ಪಟೇಲ್ ಅವರು ಮಂಗಳವಾರ ನವದೆಹಲಿಯಲ್ಲಿ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿಯಾಗಿ ರೋಗಬಾಧೆಯಿಂದ ನಷ್ಟಕ್ಕೀಡಾಗಿರುವ ತೆಂಗು ಬೆಳೆಗಾರರಿಗೆ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕೆಂದು ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ 1.18 ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದ್ದು ರಾಜ್ಯದಲ್ಲಿ ಅತಿಹೆಚ್ಚು ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಹಾಸನಕ್ಕೆ ದ್ವಿತೀಯ ಸ್ಥಾನವಿದೆ. ಈ ಬಾರಿ ರೋಗ ಉಲ್ಬಣವಾಗಿ ತೆಂಗಿನ ಮರಗಳೆಲ್ಲ ನಾಶವಾಗಿವೆ. ಕೇಂದ್ರ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನೆರವಾಗಬೇಕೆಂದು ಕೋರಿದರು.

ಇತ್ತೀಚೆಗೆ ಕೇಂದ್ರೀಯ ತೋಟಗಾರಿಕಾ ಬೆಳೆ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ) ನಡೆಸಿದ ಸಮೀಕ್ಷೆ ಪ್ರಕಾರ ತೆಂಗು ಬೆಳೆ ಹಾಳಾಗಲು ಕಪ್ಪು ತಲೆ ಹುಳು, ರುಗೋಸ್ ವೈಟ್ ಫ್ಲೈ ಕೀಟ ಮತ್ತು ಸ್ಟೆಮ್ ಬ್ಲೀಡಿಂಗ್, ಗಣೋಡರ್ಮ ವಿಲ್ಟ್ ರೋಗಬಾಧೆ ಕಾರಣವೆಂಬ ಮಾಹಿತಿ ತಿಳಿದು ಬಂದಿದೆ. ಹೀಗಾಗಿ 82 ಸಾವಿರ ಹೆಕ್ಟೇರ್ ತೆಂಗು ವೈಟ್ ಫ್ಲೈ ಕೀಟಬಾಧೆ,



15,704 ಹೆ. ಸ್ಟೆಮ್ ಬ್ಲೀಡಿಂಗ್ ರೋಗ ಹಾಗು 10,473 ಹೆಕ್ಟೇರ್‌ನಲ್ಲಿ ಬೆಳೆದಿದ್ದ ತೆಂಗು ಕಪ್ಪು ತಲೆ ಹುಳುವಿನಿಂದಾಗಿ ನೆಲ ಕಚ್ಚಿದೆ. ಅರಸೀಕೆರೆ ಮತ್ತು ಚನ್ನರಾಯ ಪಟ್ಟಣದಲ್ಲಿ ಅತಿಹೆಚ್ಚು ಹಾನಿಯುಂಟಾಗಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಸಚಿವರ ಗಮನ ಸೆಳೆದರು.

ಸಿಪಿಸಿಆರ್‌ಐನ ಪ್ರಾತ್ಯಕ್ಷಿಗೆಳನ್ನು ಅರಸೀಕೆರೆ, ಚನ್ನರಾಯಪಟ್ಟಣ, ಬೇಲೂರು, ಹಾಸನ ಮತ್ತು ಹೊಳೆನರಸೀಪುರ ತಾಲ್ಲೂಕಿನಲ್ಲಿ ವಿಸ್ತರಿಸಬೇಕು. ಅರಸೀಕೆರೆ ಹಾಗು ಹೊಳೆನರಸೀಪುರದಲ್ಲಿ ಜೈವಿಕ ನಿಯಂತ್ರಣ ಪ್ರಯೋಗಾಲಯಗಳ ಸ್ಥಾಪನೆಗೆ ಮಂಜೂರಾತಿ ನೀಡಬೇಕು. ಜೊತೆಗೆ ತೆಂಗು ಅಭಿವೃದ್ಧಿ ಮಂಡಳಿಯಿಂದ ಜಿಲ್ಲೆಯ ತೆಂಗು ಬೆಳೆಗಾರರಿಗೆ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕೆಂದು ಆಗ್ರಹಿಸಿದರು.

# ಶ್ವಾಸಕೋಶ ಸೋಂಕು: ದೇಹದಾರ್ಢ್ಯ ಪಟು ಸಾವು

• ಪ್ರಜೋದಯ ವರದಿ



**ಸಕಲೇಶಪುರ:** ಶ್ವಾಸಕೋಶದ ಸೋಂಕಿನಿಂದ ದೇಹದಾರ್ಢ್ಯ ಪಟು ಸಾವನ್ನಪ್ಪಿ ರುವ ಘಟನೆ ತಾಲ್ಲೂಕಿನ ಬೆಳಗೋಡು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಸೋಮಶೇಖರ್ (30) ಮೃತಪಟ್ಟ ದುರ್ದೈವಿ.

ಜಿಮ್ ಸೋಮ ಎಂದೇ ಖ್ಯಾತಿಯಾಗಿದ್ದ ಯುವಕ ಸೋಮಶೇಖರ್ ಆರೂವರೆ ಅಡಿ ಎತ್ತರ, 110 ಕೆ.ಜಿ. ತೂಕವಿದ್ದರು. ಬಾಡಿಬಿಲ್ಡಿಂಗ್‌ನಲ್ಲಿ ಮಿಸ್ಟರ್ ಹಾಸನ್ ಸೇರಿ ಹಲವಾರು ಟೈಟಲ್ ಜಯಿಸಿದ್ದ ಸೋಮ ರಾಷ್ಟ್ರಮಟ್ಟದ ದೇಹದಾರ್ಢ್ಯ ಸ್ಪರ್ಧೆಗೆ ಸಿದ್ಧತೆ ನಡೆಸುತ್ತಿದ್ದರು. ಒಂದು ವಾರದಿಂದ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದು, ಭಾನುವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದು ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ರಾತ್ರಿ ಮೃತ ಪಟ್ಟಿದ್ದಾರೆ.

ಸೋಮಶೇಖರ್ ಅವರ ಅಕಾಲಿಕ ನಿಧನಕ್ಕೆ ಸ್ನೇಹಿತರು, ಸಂಬಂಧಿಕರು ಮತ್ತು ಗ್ರಾಮಸ್ಥರು ಶೋಕಸಂತಪ್ತರಾಗಿದ್ದಾರೆ. ಅವರ ಅಂತಿಮ ಸಂಸ್ಕಾರವು ಸೋಮವಾರ ಗ್ರಾಮದಲ್ಲಿ ನೆರ ವೇರಿತು. ಶಾಸಕ ಸಿಮೆಂಟ್ ಮಂಜು ಅವರು ಗ್ರಾಮಕ್ಕೆ ತೆರಳಿ ಮೃತರ ಅಂತಿಮ ದರ್ಶನ ಪಡೆದು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

# ರಾಜೀನಾಮೆ ಕೊಟ್ಟು ನೆಮ್ಮದಿ ಜೀವನಕ್ಕೆ ನೆರವಾಗಿ

• ಪ್ರಜೋದಯ ವರದಿ

**ಬೆಂಗಳೂರು:** ಅಧಿಕಾರದ ಲಾಲಸೆಗೆ, ದುರಾಡಳಿತಕ್ಕೆ ಜನಸಾಮಾನ್ಯರು ಇನ್ನಾವ ರೀತಿ ಪರದಾಡಬೇಕು. ದಯವಿಟ್ಟು ರಾಜೀನಾಮೆ ಕೊಟ್ಟು ಕನ್ನಡಿಗರಿಗೆ ನೆಮ್ಮದಿಯ ಜೀವನ ಮಾಡಲು ಬಿಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಕಿಡಿಕಾರಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರ ಸಂಬಂಧ ಪ್ರತಿಕ್ರಿಯಿಸಿದ ಅವರು, ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗಲು, ನೌಕರರು, ಉದ್ಯೋಗಿಗಳು ಕೆಲಸಕ್ಕೆ ಹೋಗಲು, ನೆಂಟರಿಷ್ಟರ ಮನೆಗಳಿಗೆ, ಶುಭ ಸಮಾರಂಭಗಳಿಗೆ, ಸಾವು-ನೋವಿಗೆ ಹೋಗಲು ಬಸ್‌ಗಳಿಲ್ಲ. ಇದು ಬಹುಪಾಲು ಕನ್ನಡಿಗರ ಇವತ್ತಿನ ಬವಣೆ ಎಂದಿದ್ದಾರೆ. ರಾಜ್ಯದ ಖಜಾನೆ ಖಾಲಿ ಮಾಡಿ ಪಾಪರ್ ಆಗಿರುವ ಕಾಂಗ್ರೆಸ್ ಸರ್ಕಾರಕ್ಕೆ ಚೆಲ್ಲಾಟ, ಜನಸಾಮಾನ್ಯರಿಗೆ ಪರದಾಟ, ಗೋಳಾಟ, ತೊಳಲಾಟ. ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರೇ, ನಿಮ್ಮ ಘನಂದಾರಿ ಆಡಳಿತದಿಂದ ಸಾರಿಗೆ ನಿಗಮಗಳನ್ನು ಸರ್ವನಾಶ ಮಾಡಿಬಿಟ್ಟರಲ್ಲ ಸ್ವಾಮಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಅರಕಲಗೂಡು ಮಾಸ್ಟರ್ ಪ್ಲಾನ್ ಹೆಸರಲ್ಲಿ ವಸೂಲಿ: ಎ.ಮಂಜು ಆಕ್ರೋಶ

## ಉದ್ದೇಶಿತ ಯೋಜನೆ ಅಂತಿಮಗೊಂಡಿಲ್ಲ | ಆತಂಕ ಬೇಡವೆಂದು ಶಾಸಕರ ಅಭಯ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಸಮಗ್ರ ಅಭಿವೃದ್ಧಿ ಹಿನ್ನಲೆ 2041ರ ಮಾಸ್ಟರ್ ಯೋಜನೆ ಸಿದ್ಧಗೊಂಡಿದೆಯಾದರೂ ಅಂತಿಮಗೊಂಡಿಲ್ಲ. ಹೀಗಿದ್ದರೂ ಕೆಲವರು ಮಾಸ್ಟರ್ ಪ್ಲಾನ್‌ನಲ್ಲಿರುವ ಸರ್ವೆ ನಂಬರ್ ಮಾಲೀಕರನ್ನು ಸಂಪರ್ಕಿಸಿ ಆಮಿಷ ಒಡುತ್ತಿದ್ದಾರೆಂದು ಶಾಸಕ ಎ.ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲ್ಲೂಕು ಕೇಂದ್ರ ದಿಂದ 5 ಕಿ.ಮೀ. ದೂರದ ಒಳಗೆ ಪಟ್ಟಣದ ಸಮಗ್ರ ಅಭಿವೃದ್ಧಿಯನ್ನು ಈ ಯೋಜನೆ ಒಳಗೊಂಡಿದೆ. ಅದು ಇನ್ನೂ ಅಂತಿಮಗೊಂಡಿಲ್ಲ. ಅದರ ರೂಪುರೇಷೆಗಳ ಕುರಿತು ಯಾವ



ಅಧಿಕಾರಿಗಳು ನನ್ನೊಂದಿಗೆ ಚರ್ಚಿಸಿಲ್ಲ. ಯೋಜನೆ ಸಿದ್ಧಗೊಂಡಿದೆ ವಿನಃ ಅಂತಿಮಗೊಂಡಿಲ್ಲ. ಕ್ಷೇತ್ರದಲ್ಲಿ ಕೆಲವರು ಈ ಯೋಜನೆ ಹಿಡಿದುಕೊಂಡು ನಿಮ್ಮ ಜಮೀನಿನಲ್ಲಿ ರಸ್ತೆ ಹೋಗುತ್ತೆ. ಬಫರಿಂಗ್ ಜೋನ್, ಯಲ್ಲೋ ಜೋನ್ ಇತರೆ ವಿಷಗಳನ್ನಿಟ್ಟುಕೊಂಡು ನಿಮ್ಮ ಜಮೀನನ್ನು ಯೋಜನೆಯಿಂದ ಕೈ ಬಿಡುತ್ತೇವೆಂದು ಹೇಳಿ ವಸೂಲಾತಿ ನಡೆಸುತ್ತಿರುವ ಮಾಹಿತಿ ಬಂದಿದೆ. ಅದಕ್ಕೆ ಯಾರೂ ಅವಕಾಶ ಮಾಡಿಕೊಡ ಬಾರದು. ಈ ಯೋಜನೆ ಅನುಮೋದನೆಗೆ ಇನ್ನೂ ಸಮಯವಿದೆ. ನಿಮ್ಮ ಜಮೀನು ಯೋಜನೆಗೆ ಒಳಪಟ್ಟಿದ್ದರೆ ನಾಲ್ಕು ಪಟ್ಟು ಪರಿಹಾರ ಪಡೆದು ಕೊಳ್ಳಬಹುದೆಂದು ಅಭಯ ನೀಡಿದರು.

ಈಗಿನ ಯೋಜನೆಯಲ್ಲಿ ಒಂದಷ್ಟು ಪ್ರಗತಿಗೆ ಜಾಗವನ್ನು ಗುರುತಿಸಲಾಗಿದೆ. 489.62 ಹೆಕ್ಟೇರ್ ವಿಸ್ತೀರ್ಣ ವಸತಿಗೆಂದು ಶೇ.63.15 ಗುರುತಿಸಲಾಗಿದೆ. ಟ್ರಾನ್ಸ್ ಪಾಟೇಷನ್ ಅಂಡ್ ಕಮ್ಯುನಿಕೇಷನ್‌ಗೆ 127.97 ಹೆಕ್ಟೇರ್ ಒಟ್ಟು 775.52 ಹೆಕ್ಟೇರ್ ಇರಬೇಕಿದೆ. ಈ ಪ್ಲಾನ್ ಇನ್ನೂ ಅಂತಿಮಗೊಂಡಿಲ್ಲದ ಪರಿಣಾಮ ಕೆಲವು ವ್ಯಕ್ತಿಗಳು ಇದನ್ನೆ ತೋರಿಸಿ ಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಆರೋಪಿಸಿದರು.

ಈ ಕೆಲಸವನ್ನು ಕೂಡಲೇ ನಿಲ್ಲಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಕೂಡ ಸೂಕ್ತ ತಿಳಿವಳಿ ಕೆಯನ್ನು ಜನಸಾಮಾನ್ಯರಿಗೆ ನೀಡಬೇಕಿದೆ. ನಿಯೋಜಿತ ಪ್ಲಾನ್ ಅನ್ನು ತೋರಿಸಿ ಕೆಲವರು ಬಂಡವಾಳ ಮಾಡಿಕೊಳ್ಳಲು ಮುಂದಾಗಿದ್ದಾರೆ. ಈ ಕೆಲಸ ನಿಲ್ಲಿಸದ್ದಿದ್ದರೆ ಸಾರ್ವಜನಿಕರಿಂದ ನಿಂದನೆಗೆ ಒಳಗಾಗಬೇಕಾಗುತ್ತದೆ. ಅಧಿಕಾರ ಸಿಕ್ಕಿದೆ ಎಂಬ ಅಹಂನಿಂದ ದುರುಪಯೋಗ ಮಾಡಿಕೊಂಡರೇ ಮುಂದಿನ ದಿನಗಳಲ್ಲಿ ಕ್ರಮ ಎದುರಿಸಬೇಕಾಗುತ್ತದೆಂದು ಎಚ್ಚರಿಸಿದರು.

**1.66 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ**

ಗ್ರಾಮೀಣ ಸಂಪರ್ಕ ರಸ್ತೆಗಳನ್ನು 1.66 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆಯೆಂದು ಶಾಸಕ ಎ.ಮಂಜು ತಿಳಿಸಿದರು.

ತಾಲ್ಲೂಕಿನ ಕೊಡಕಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾ ಡಿದ ಅವರು, ಸರ್ಕಾರ ಇತ್ತೀಚೆಗೆ ಅನುದಾನ ಕೊಡಲು ಆರಂಭಿಸಿದೆ. ಇನ್ನಾದರೂ ಬಜೆಟ್‌ನಲ್ಲಿ ಘೋಷಿಸಿರುವ ಅನುದಾನವನ್ನು ನಿಗದಿತ ಅವಧಿಯೊಳಗೆ ಬಿಡುಗಡೆ ಮಾಡಿದರೇ ಜನ ರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಬಹುದಾಗಿದೆ ಎಂದು ಹೇಳಿದರು.

ಇಂದು ಭೂಮಿ ಪೂಜೆ ಮಾಡಿರುವ

» ನಾಲ್ಕನೇ ಪುಟದಲ್ಲಿ

# ಸಾರಿಗೆ ನೌಕರರ ಮುಷ್ಕರ: ಜಿಲ್ಲೆಯಲ್ಲಿ ರಸ್ತೆಗಿಳಿಯದ ಬಸ್‌ಗಳು

## ಬಿಕೋ ಎನ್ನುತ್ತಿದ್ದ ಬಸ್ ನಿಲ್ದಾಣ: ಪ್ರಯಾಣಿಕರ ಪರದಾಟ: ಖಾಸಗಿ ವಾಹನಗಳೇ ಆಶ್ರಯ

• ಪ್ರಜೋದಯ ವರದಿ

**ಹಾಸನ:** ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸಾರಿಗೆ ನೌಕರರ ಒಕ್ಕೂಟ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದ ಮುಷ್ಕರದ ಹಿನ್ನಲೆ ಜಿಲ್ಲೆಯಲ್ಲಿ ಕೆಎಸ್ ಆರ್‌ಟಿಸಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡು ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು.

ಜಿಲ್ಲೆಯಲ್ಲಿ ಸೋಮವಾರ ಸಂಜೆಯಿಂದ ಬಸ್‌ಗಳ ಸಂಚಾರ ವ್ಯತ್ಯಯಗೊಂಡಿದ್ದರಿಂದ ಪ್ರಯಾಣಿಕರು ಖಾಸಗಿ ಬಸ್, ಟಿ.ಟಿ. ವಾಹನಗಳನ್ನು ಆಶ್ರಯಿಸಬೇಕಾಯಿತು. ಮುಷ್ಕರಕ್ಕೆ ಕರೆ ನೀಡಿದ್ದರಿಂದ ಯಾವೊಬ್ಬ ಸಾರಿಗೆ ನೌಕರ ಕರ್ತವ್ಯಕ್ಕೆ ಹಾಜರಾಗಲಿಲ್ಲ. ಅದರಿಂದ ಜಿಲ್ಲೆಯ ಹಾಸನದ ಎರಡು ಘಟಕ, ಚನ್ನರಾಯ ಪಟ್ಟಣ, ಹೊಳೆನರಸೀಪುರ ಹಾಗು ರಾಮನಾಥಪುರ ತಲಾ ಒಂದೊಂದು ಡಿಪೋ ವ್ಯಾಪ್ತಿಯಲ್ಲಿ 500ಕ್ಕೂ ಹೆಚ್ಚು ಬಸ್ ಹಾಗು ಸುಮಾರು 3 ಸಾವಿರ ನೌಕರರು, ಸಿಬ್ಬಂದಿ ಕರ್ತವ್ಯದಿಂದ ಹೊರಗುಳಿದಿದ್ದರು.

ಹಾಸನದ ಎರಡೂ ಘಟಕಗಳಲ್ಲಿ 230 ಸಾರಿಗೆ ಬಸ್ ನಿಂತಿದ್ದವು. ಹೀಗಾಗಿ ನಗರ ಹಾಗು ಜಿಲ್ಲಾದ್ಯಂತ ಬಸ್ ನಿಲ್ದಾಣಗಳು ಬಸ್ ಹಾಗೂ ಪ್ರಯಾಣಿಕರಿಲ್ಲದೆ ಭಣಗುಡುತ್ತಿದ್ದವು.

» ನಾಲ್ಕನೇ ಪುಟದಲ್ಲಿ



### ಮಾಲೀಕರು-ಚಾಲಕರು ಅಸಮಾಧಾನ

ಈ ನಡುವೆ ಮುಷ್ಕರ ನಡುವೆಯೂ ಬೇರೆ ಚಾಲಕರನ್ನು ಕರೆಸಿ ಬಸ್ ಸಂಚಾರ ಆರಂಭಿಸಲು ಅಧಿಕಾರಿಗಳ ಸರ್ಕಸ್ ನಡೆಸಿದರಾದರೂ ಅದು ಫಲಿಸಲಿಲ್ಲ. ಇದಕ್ಕೆ ಖಾಸಗಿ ವಾಹನ ಮಾಲೀಕರು, ಚಾಲಕರು ಸಿಟ್ಟು ಹೊರ ಹಾಕಿದರು. ಆರ್‌ಟಿಓ ಅಧಿಕಾರಿಗಳು ಹೇಳಿದಂತೆ ನಾವು ಇಲ್ಲಿಗೆ ಬಂದಿದ್ದೇವೆ, ಅವರು ನಿಗದಿ ಪಡಿಸಿರುವ ದರ ಪಡೆದೇ ಪ್ರಯಾಣಿಕರನ್ನು ಕರೆದುಕೊಂಡು ಹೋಗಲು ಸಿದ್ಧರಿದ್ದೇವೆ. ಆದರೆ, ಸಾರಿಗೆ ಬಸ್‌ಗಳನ್ನೇ ಓಡಿಸುವ ನಡೆಯನ್ನು ನಾವು ಒಪ್ಪುವುದಿಲ್ಲ ಎಂದು ಅಸಮಾಧಾನ ಹೊರ ಹಾಕಿ, ಬಸ್ ನಿಲ್ದಾಣದಿಂದ ಹೊರ ಹೋದರು.ಅವರನ್ನು ಕರೆತರಲು ಅಧಿಕಾರಿಗಳು ಮತ್ತಷ್ಟು ಕಸರತ್ತು ಮಾಡಬೇಕಾಯಿತು.

# ಕರ್ತವ್ಯ ಲೋಪ ಎಸಗಿದರೆ ಕ್ರಮಕ್ಕೆ ಶಿಫಾರಸ್ಸು: ಶಾಸಕರ ಎಚ್ಚರಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯ ಮೂವರು ಅಧಿಕಾರಿಗಳು ಮಾಡಿದ ತಪ್ಪಿಗೆ ಅಮಾನತುಗೊಂಡಿದ್ದಾರೆ. ಈಗಿರುವ ನೌಕರರು ಅದೇ ಧೋರಣೆ ಮುಂದುವರೆಸಿದರೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮಕ್ಕೆ ಸೂಚಿಸಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಎಚ್ಚರಿಕೆ ನೀಡಿದರು.

ಎಆರ್‌ಟಿಓ ಕಚೇರಿಗೆ ಮಂಗಳವಾರ ದಿಢೀರ್ ಭೇಟಿ ಮೂಲಕ ಅಧಿಕಾರಿಗಳ ಕಾರ್ಯವೈಖರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ರೆಕಾರ್ಡ್ ರೂಂ ಹೊರತುಪಡಿಸಿ ಸಾರ್ವಜನಿಕರು ಕಚೇರಿಯ ಎಲ್ಲಿ ಬೇಕಾದರೂ ಅಧಿಕಾರಿಗಳನ್ನು ನೇರವಾಗಿ ಭೇಟಿಯಾಗಿ ತಮ್ಮ ಕೆಲಸ



ಮಾಡಿಕೊಳ್ಳ ಬಹುದು. ಮಧ್ಯವರ್ತಿಯೊಬ್ಬರ ಹುಟ್ಟು ಹಬ್ಬವನ್ನು ಕಚೇರಿಯಲ್ಲೇ ಆಚರಿಸಿದ್ದಕ್ಕಾಗಿ ಮೂವರು ಅಮಾನತಾಗಿದ್ದಾರೆ. ಈಗಿರುವ ನೌಕರರು ಪಾರದರ್ಶಕವಾಗಿ ಕೆಲಸ ಮಾಡುತ್ತಿಲ್ಲ ವೆಂಬ ದೂರು ಕೇಳಿ ಬಂದ ಹಿನ್ನಲೆಯಲ್ಲಿ ಭೇಟಿ ನೀಡಿದ್ದೇನೆ. ಅಧಿಕಾರಿಗಳು ಧೋರಣೆ ಬದಲಾಯಿಸಿಕೊಂಡು ಸಾರ್ವಜನಿ ಕರ ಕೆಲಸಗಳಿಗೆ ಆದ್ಯತೆ ನೀಡಬೇಕೆಂದರು.

ಸಾರ್ವಜನಿಕರು ಕಟ್ಟುವ ತೆರಿಗೆ ಹಣದಿಂದ ಸಂಬಳ ಪಡೆಯುವ ನೌಕರರು ಅವರ ಸಮಸ್ಯೆಗೆ ಸ್ಪಂದಿಸಬೇಕು. ಸಕಲೇಶಪುರದ ಜನರು ಸೂಕ್ಷ್ಮ ಸ್ವಭಾವದವರು. ಅಗೌರವದಿಂದ ವರ್ತಿಸಿದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲ. ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕೆಂದರು.

ಕಚೇರಿಯಲ್ಲಿ ಸಿಬ್ಬಂದಿ ಕೊರತೆ ಇರುವುದು ನನಗೆ ತಿಳಿದಿದೆ. ಸಾರಿಗೆ ಸಚಿವರೊಂದಿಗೆ ಈ ಬಗ್ಗೆ ಚರ್ಚಿಸಿದ್ದೇನೆ. ಶೀಘ್ರದಲ್ಲೇ ಖಾಲಿ ಹುದ್ದೆಗಳ ಭರ್ತಿ ಮಾಡಲಾಗುವುದು. ಮುಂದಿನ ದಿನಗಳಲ್ಲಿ ನಾನು ಪದೇ ಪದೇ ಕಚೇರಿಗೆ ಭೇಟಿ ನೀಡುತ್ತೇನೆಂದರು.

» ನಾಲ್ಕನೇ ಪುಟದಲ್ಲಿ

# ಅರಣ್ಯ ಇಲಾಖೆಯಿಂದ ಬೆಳೆ ನಾಶ: ಪರಿಹಾರಕ್ಕಾಗಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಅನುಭೋಗದಲ್ಲಿರುವ ಗೋಮಾಳ ಜಮೀ ನನ್ನು ತರೆವುಗೊಳಿಸಿ, ಬೆಳೆದಿದ್ದ ಮೆಕ್ಕೆಜೋಳ ಹಾಗು ಇತರೆ ಬೆಳೆಗಳನ್ನು ನಾಶ ಮಾಡಿರುವುದಕ್ಕೆ ಪರಿಹಾರ ನೀಡುವಂತೆ ಒತ್ತಾಯಿಸಿ ತಾಲ್ಲೂಕಿನ ಸಾವಂತನಹಳ್ಳಿ ಗ್ರಾಮದ ರೈತರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಸಾವಂತನಹಳ್ಳಿ ಬಳಿಯ ಗೋಮಾಳ ವಿಚಾರದ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದರೂ, ಅರಣ್ಯಾಧಿಕಾರಿಗಳು ದಾಳಿ ನಡೆಸಿ ಜಮೀನಿನಲ್ಲಿ ಬೆಳೆದಿದ್ದ ಮೆಕ್ಕೆಜೋಳ ಸೇರಿ ಇತರೆ ಬೆಳೆಯನ್ನು ಜೆಸಿಬಿ ಯಂತ್ರಗಳ ಮೂಲಕ ನಾಶ ಮಾಡಿರುವುದು ಖಂಡನೀಯ. ಬೆಳೆ ಹಾನಿ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಬಡ ಕುಟುಂಬಗಳಿಗೆ ಸೂಕ್ತ ರಕ್ಷಣೆ, ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ ಅವರು ಮಾತನಾಡಿ, ಸಾವಂತನಹಳ್ಳಿ ಗ್ರಾಮದ ಸರ್ವೆ ನಂ.99 ರಲ್ಲಿರುವ ಗೋಮಾಳದಲ್ಲಿ 40-50 ವರ್ಷಗಳಿಗೂ ಮೇಲ್ಪಟ್ಟು ಹಲವು ರೈತರು ಸಾಗುವಳಿ ಮಾಡುತ್ತಾ ಅನುಭೋಗದಲ್ಲಿದ್ದಾರೆ. ಜಾಗದ ಸಂಬಂಧ ಮಂಜೂ ರಾತಿ ಪತ್ರ ಮತ್ತು ಖಾತಾ ಆದೇಶ ಹೊಂದಲು ಸಾಧ್ಯವಾಗದ ಕಾರಣ ಗ್ರಾಮಸ್ಥರು ಹೈಕೋರ್ಟ್ ಮೊರೆ ಹೋಗಿದ್ದಾರೆ. ಆದರೆ, ಅನುಭೋಗದಲ್ಲೇ ಇಲ್ಲದ ಬೇರೆಯವರು ತಮಗೆ ಮಂಜೂ ರಾಗಿದೆ ಎಂದು ನಕಲಿ ದಾಖಲಾತಿ ಸೃಷ್ಟಿಸಿಕೊಂಡು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಭೂಮಿ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದರೂ, ದಾಖಲಾತಿ ಲಭ್ಯವಿಲ್ಲ ಎಂದು ಹಿಂಬರಹ ನೀಡಿರುವ ಅಧಿಕಾರಿಗಳು, ಅದೇ ಗೋಮಾಳದ ಜಮೀನನ್ನು ಕಾನೂನು ಬಾಹಿರ



ವಾಗಿ ಅರ್ಹರಲ್ಲದವರಿಗೆ ಮಂಜೂರು ಮಾಡಿರುವುದಾಗಿ ಆದೇಶ ಮಾಡಿರುವುದು ಹೇಗೆ ಎಂದು ಪ್ರಶ್ನಿಸಿದ ಅವರು, ಅದರಿಂದ ರೈತರಿಗೆ ಅನ್ಯಾಯವಾಗಿದೆ. ಇದರ ವಿರುದ್ಧ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್ ಕಚೇರಿಗಳ ಎದುರು ಸಾಕಷ್ಟು ಬಾರಿ ಪ್ರತಿಭಟನೆ ನಡೆಸಿದ್ದರೂ, ಯಾರಿಂದಲೂ ನ್ಯಾಯ ಸಿಕ್ಕಿಲ್ಲ ಎಂದು ದೂರಿದರು.

ಇದರ ನಡುವೆ ಆ.1ರಂದು ಅರಣ್ಯಾಧಿಕಾರಿಗಳು ಹಾಗು ಸಿಬ್ಬಂದಿ ಜಮೀನಿನಲ್ಲಿದ್ದ ಬೆಳೆ ನಾಶ ಮಾಡಿದ್ದಾರೆ. ಬೆಳೆ ಕಟಾವು ಮಾಡಿಕೊಳ್ಳಲು ಅವಕಾಶ ಕೇಳಿದರೂ ಕೊಡದೆ ಸರ್ವಾಧಿಕಾರಿಯಂತೆ ವರ್ತಿಸಿದರು. ಈ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಅಂತಿಮ ತೀರ್ಮಾನ ಆಗುವವರೆಗೂ ಹಾಗು ನಮ್ಮ ಹೋರಾಟ ತಾರ್ಕಿಕ ಅಂತ್ಯ ಕಾಣುವವರೆಗೂ ಅನು ಭೋಗದಲ್ಲಿರುವ ಗ್ರಾಮಸ್ಥರನ್ನು ಗೋಮಾಳದ ಜಮೀನಿನಿಂದ ತರೆವುಗೊಳಿಸಬಾರದು. ಅಲ್ಲೀವರೆಗೂ ಬಲವಂತದ ಕ್ರಮ ಜರುಗಿಸದಂತೆ ಸಂಬಂಧಪಟ್ಟ ಅರಣ್ಯ ಹಾಗೂ ಕಂದಾಯ ಇಲಾಖಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಗ್ರಾಮಸ್ಥರ ಹಿತ ರಕ್ಷಿಸಿ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದರು.

## ಜಾಗತಿಕ ಮಟ್ಟದಲ್ಲಿ ಕಾಫಿ ಧಾರಣೆ ಹೆಚ್ಚಳ | ಹೊಸ ತೋಟ ನಿರ್ಮಾಣ, ಹಳೆ ತೋಟ ನವೀಕರಿಸುವರ ಸಂಖ್ಯೆ ಹೆಚ್ಚಳ


# ಜಿಲ್ಲೆಯಲ್ಲಿ ಕಾಫಿ ಗಿಡಗಳಿಗೆ ಭಾರೀ ಬೇಡಿಕೆ: ಬೆಲೆ ದುಪ್ಪಟ್ಟು

• ಪ್ರಜೋದಯ ವರದಿ

**ಹಾಸನ:** ಜಾಗತಿಕ ಮಾರುಕಟ್ಟೆಯಲ್ಲಿ ಈ ಭಾರೀ ಕಾಫಿ ಧಾರಣೆ ದಾಖಲೆ ಬರೆದಿದ್ದರಿಂದ ಕಾಫಿ ಬೆಳೆಗಾರರು ಹೊಸ ಹುರುಪಿನಲ್ಲಿದ್ದಾರೆ. ಈ ಬೆಳವಣಿಗೆಯಿಂದ ಜಿಲ್ಲೆಯ ಮಲೆನಾಡು, ಅರೆಮಲೆನಾಡು ಭಾಗದಲ್ಲಿ ಹೊಸದಾಗಿ ಕಾಫಿ ತೋಟ ಮಾಡುವವರು ಮತ್ತು ಹಳೆಯ ತೋಟಗಳನ್ನು ನವೀಕರಿಸಲು ಮುಂದಾಗಿರುವುದರಿಂದ ಕಾಫಿ ಗಿಡಗಳಿಗೆ ಭಾರೀ ಬೇಡಿಕೆ ಸೃಷ್ಟಿಯಾಗಿದೆ.

ಕಾಫಿ ಬೆಲೆ ಸಾರ್ವಕಾಲಿಕ ದಾಖಲೆ ನಿರ್ಮಿಸಿದ್ದರಿಂದ ಹಲವು ವರ್ಷಗಳಿಂದ ಕಾಫಿ ಬೆಳೆಯ ಬಗ್ಗೆ ನಿರಾಶರಾಗಿದ್ದ ಬೆಳೆಗಾರರಲ್ಲಿ ಈಗ ಮತ್ತೊಮ್ಮೆ ಆಸಕ್ತಿ ಮೂಡಿದೆ. ಕಾಫಿ ಬೆಲೆ ಏರಿಕೆಯಂತೆ ಕಾಫಿ ಗಿಡಗಳ ಬೆಲೆ ಕೂಡ ದುಪ್ಪಟ್ಟಾಗಿದೆ. ಹಿಂದೆ 6 ರಿಂದ 10ರೂ.ಗೆ ಸಿಗುತ್ತಿದ್ದ ಗಿಡಗಳ ಬೆಲೆ ಈಗ 20 ರಿಂದ 25ರೂ.ಗೆ ತಲುಪಿದೆ.

ಕೆಲ ವರ್ಷಗಳಿಂದ ಬೆಲೆ ಕುಸಿದಿದ್ದರಿಂದ ಹಲವು ರೈತರು ತೋಟಗಳತ್ತಾ ಗಮನ ಹರಿಸಿರಲಿಲ್ಲ. ಆದರೆ, ಈಗ ಬೆಲೆ ಹೆಚ್ಚಾದ್ದರಿಂದ ಹೊಸದಾಗಿ ಗಿಡಗಳನ್ನು ನಾಟಿ ಮಾಡಲು ಮುಂದಾಗಿದ್ದಾರೆ. ಪಾಳು ಬಿದ್ದಿದ್ದ ಜಾಗ, ಭತ್ತದ ಗದ್ದೆಗಳನ್ನು



ಕಾಫಿ ತೋಟವಾಗಿ ಪರಿವರ್ತಿಸಲು ಮುಂದಾಗಿರುವುದರಿಂದ ನರ್ಸರಿಗಳಲ್ಲಿ ಉತ್ತಮ ತಳಿಯ ಕಾಫಿ ಗಿಡಗಳಿಗೆ ಬೇಡಿಕೆ ಹೆಚ್ಚಾಗಿದೆ.

ಬೆಳೆಗಾರರು ಮುಖ್ಯವಾಗಿ ಹೈಬ್ರಿಡ್ ಮತ್ತು ಹೆಚ್ಚು ಇಳುವರಿ ನೀಡುವ ಕಾಫಿ ತಳಿಗಳನ್ನು ಬಯಸುತ್ತಿದ್ದಾರೆ. ಅದರಲ್ಲಿ, ಅರೇಬಿಕಾ ತಳಿಯಾದ ಚಂದ್ರಗಿರಿ, ಎಫ್-1 ಮತ್ತು ಕಾವೇರಿ (ಕ್ಯಟೈಮೋರ್), ಹೇಮಾವತಿ ತಳಿಗಳಿಗೆ ಹೆಚ್ಚು ಬೇಡಿಕೆ ಇದೆ. ಈ ತಳಿಗಳು ಉತ್ತಮ ರೋಗ ನಿರೋಧಕ ಶಕ್ತಿ ಮತ್ತು ಅಧಿಕ ಇಳುವರಿಯನ್ನು ಹೊಂದಿವೆ. ರೊಬಸ್ಟಾ ತಳಿಯಾದ ಡ್ರಾಫ್ ರೊಬಸ್ಟಾ, ಸಿ ಇಂಟು ಆರ್, ಸೆಲೆಕ್ಷನ್, ಓಲ್ಡ್ ರೊಬಸ್ಟಾಗೆ ಭಾರೀ ಬೇಡಿಕೆ ಕಂಡು ಬಂದಿದೆ. ಇದು ಕೀಟ ಬಾಧೆಗೆ ಹೆಚ್ಚು ಪ್ರತಿರೋಧಕವಾಗಿದ್ದು ಉತ್ತಮವಾಗಿ ಬೆಳೆಯುತ್ತದೆ.

ಹೀಗಾಗಿ ಸಕಲೇಶಪುರ ಮತ್ತು ಆಲೂರು

» ನಾಲ್ಕನೇ ಪುಟದಲ್ಲಿ

### ಅಡಿಕೆ, ಮೆಣಸು, ಏಲಕ್ಕಿಗೂ ಬೇಡಿಕೆ

ಕಾಫಿ ಮಾತ್ರವಲ್ಲದೇ ಅಡಿಕೆ ಗಿಡಗಳು, ಕಾಳು ಮೆಣಸು, ಏಲಕ್ಕಿ ಸಸಿಗಳಿಗೂ ಬೇಡಿಕೆ ಕಂಡು ಬಂದಿದೆ. ಅಡಿಕೆ ತೀರ್ಥಳ್ಳಿ ತಳಿ ಒಂದಕ್ಕೆ 20 ರಿಂದ 25 ರೂ. ವರೆಗೆ ಬೆಲೆ ಇದೆ. ಈ ಹಿಂದೆ 10 ರಿಂದ 12 ರೂ. ಗೆ ಸಿಗುತ್ತಿತ್ತು. ಅದೇ ರೀತಿ ಕಾಳು ಮೆಣಸು ಗಿಡ ಒಂದಕ್ಕೆ 15 ರಿಂದ 35 ರೂ. ವರೆಗೂ ಬೆಲೆ ಇದೆ. ಪಿ1, ಪಿ2, ಪಂಚಮಿ, ಶುಭಂಶಂಕರಂ, ಕರಿಮುಂಡ, ಚೋಳಮುಂದ ಸೇರಿ ಹಲವು ತಳಿಗೆ ಬೇಡಿಕೆ ಇದೆ. ಏಲಕ್ಕಿಯಲ್ಲಿ ನಲ್ಯಾಣಿ ಗ್ರೀನ್‌ಗೋಲ್ಡ್ ತಳಿಗೆ ಒಂದು ಗಿಡಕ್ಕೆ 25ರೂ. ಇದೆ.

**ಕಾಫಿಗಿಡಗಳ ಬೆಲೆ (ಒಂದಕ್ಕೆ)**

| ತಳಿ | ಹಿಂದಿನ ಬೆಲೆ | ಈಗಿನ ಬೆಲೆ |
|---|---|---|
| ಚಂದ್ರಗಿರಿ | 6 ರೂ. | 20 ರೂ. |
| ಡ್ರಾಫ್ ರೊಬಸ್ಟಾ | 10-12 | 15ರೂ. |
| ಸಿಆರ್ | 6 ರಿಂದ 8 | 10 ರಿಂದ 12 |
| ಓಲ್ಡ್ ರೊಬಸ್ಟಾ | 5-6 | 10 ರಿಂದ 12 |
| ಟಿಆರ್-9 | 10 | 15 ರಿಂದ 18 |
| ಟಿಆರ್-11 | 10 | 15 ರಿಂದ 18 |

**ಕಾಫಿಗೆ ಉತ್ತಮ ಬೆಲೆ ಬರುತ್ತಿದ್ದಂತೆ ಕಾಫಿ ಗಿಡಗಳಿಗೆ ಭಾರೀ ಬೇಡಿಕೆ ಬಂದಿದೆ. ಹಿಂದೆ ನಮ್ಮ ನರ್ಸರಿಯಲ್ಲಿ 10 ರಿಂದ 15 ಲಕ್ಷ ಗಿಡಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ವರ್ಷ 50 ಲಕ್ಷ ಗಿಡಗಳನ್ನು ಬೆಳೆಯಲಾಗಿದೆ. ಅದೇ ರೀತಿ ಗಿಡಗಳ ಬೆಲೆ ಕೂಡ ಹೆಚ್ಚಾಗಿದೆ.**

**-ಇಬ್ರಾಹಿಂ, ಆಜ್ವಾದ್ ಡಿಜಿಎನ್ ನರ್ಸರಿ**

C M Y K

# ಸಾರಿಗೆ ಮುಷ್ಕರ: ಖಾಸಗಿ ಬಸ್‌ಗಳತ್ತ ಜನರ ಚಿತ್ತ

## ದುಬಾರಿ ಹಣ ಕೊಡಬೇಕಾದ ಸಂದಿಗ್ಧತೆ: ರಾಜ್ಯ ಸರ್ಕಾರ- ಸಾರಿಗೆ ನೌಕರರಿಗೆ ಹಿಡಿಶಾಪ ಹಾಕಿದ ಸಾರ್ವಜನಿಕರು..!

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಸಲು ಬಂದ ಸಾರ್ವಜನಿಕರು ಸರ್ಕಾರಿ ಬಸ್ ಇಲ್ಲದೆ ನಿರಾಶೆಯಿಂದ ಖಾಸಗಿ ವಾಹನಗಳ ಕಡೆ ಮುಖ ಮಾಡಿದ್ದು ಕಂಡು ಬಂದಿತು.



ರಾಜ್ಯ ರಸ್ತೆ ಸಾರಿಗೆ ನೌಕರರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿ ನಡೆಸುತ್ತಿರುವ ಮುಷ್ಕರಕ್ಕೆ ಸಾಕ್ಷಿಯಾದಂತೆ ಬೇಲೂರು ಪಟ್ಟಣದಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮಂಗಳವಾರ ಮುಂಜಾನೆಯಿಂದಲೇ ಬಸ್ ನಿಲ್ದಾಣದಲ್ಲಿ ಸರ್ಕಾರಿ ಬಸ್‌ಗಳು ಎಂದಿನಂತೆ ಚಾಲನೆ ಇಲ್ಲದ ಪರಿಣಾಮ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಮತ್ತು ಪ್ರಯಾಣಿಕರಲ್ಲಿ ಆತಂಕ ಉಂಟಾಗಿ ಪ್ರಯಾಣಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಖಾಸಗಿ ವಾಹನಗಳ ಕಡೆ ಮುಖ ಮಾಡುತ್ತಿರುವುದು ಕಂಡು ಬಂದಿತು. ಇದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರರಿಂದ ನೆಡೆಸುತ್ತಿರುವ ಮುಷ್ಕರಕ್ಕೆ ಬೇಲೂರಿನಲ್ಲೂ ಹೆಚ್ಚಿನ ಪ್ರಭಾವ ಬೀರಿದಂತಾಗಿದ್ದು ಕಂಡುಬಂದಿತು. ವಿಶೇಷವಾಗಿ ದಿನ ನಿತ್ಯ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲ್ಲುವ ನಿಲ್ದಾಣದಲ್ಲಿ ಇಂದು ಮುಂಜಾನೆಯಿಂದಲೇ ಖಾಸಗಿ ಬಸ್ಸುಗಳು ನಿಂತಿರುವುದನ್ನ ಕಂಡ ಸಾರ್ವಜನಿಕರು ಕೆಲವರು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಸರ್ಕಾರಕ್ಕೆ ಹಾಗೂ ಸಾರಿಗೆ ನೌಕರರಿಗೆ ಹಿಡಿಶಾಪ ಹಾಕಿದರು.

ಇದೇ ಸಂದರ್ಭ ಸ್ಥಳದಲ್ಲಿದ್ದ ಶ್ರೀ ಚನ್ನಕೇಶವ ವಾಹನ ಮಾಲೀಕರ ಮತ್ತು ಚಾಲಕರ ಸಂಘದ ತಾಲೂಕು ಅಧ್ಯಕ್ಷ ಯಮಸಂಧಿ ಪಾಪು ಮಾತನಾಡಿ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆ ವತಿಯಿಂದ ಸೂಚನೆ ನೀಡಲಾದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮತ್ತು ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಮತ್ತು ಯಾವುದೇ ದುಬಾರಿ ಹಣ ಪಡೆಯದಂತೆ ಖಾಸಗಿ ವಾಹನ ಮಾಲೀಕರು ಮತ್ತು ಚಾಲಕರ ಸಂಘದ ವತಿಯಿಂದ ತೀರ್ಮಾನಿಸಿ ಇಂದು ಮುಂಜಾನೆಯಿಂದಲೇ ತಾಲ್ಲೂಕಿನ ಎಲ್ಲಾ ಗ್ರಾಮೀಣ ಭಾಗಗಳಿಗೂ ಹಾಗೂ ವಿವಿಧ ಜಿಲ್ಲೆಗಳಿಗೂ ಖಾಸಗಿ ಬಸ್ ಗಳು ಮತ್ತು ವ್ಯಾನ್ ಗಳು ಸೇರಿದಂತೆ ಇತರೆ ವಾಹನಗಳನ್ನು ಕಲ್ಪಿಸಲಾಗಿದೆ ಎಂದ ಅವರು, ಉಚಿತವಾಗಿ ಗರ್ಭಿಣಿಯರಿಗೆ ಹಾಗೂ ರೋಗಿಗಳಿಗೆ ಯಾವುದೇ ಹಣ ಪಡೆಯದಂತೆ ಪ್ರಯಾಣ ಸೌಲಭ್ಯ ಒದಗಿಸಿದ್ದೇವೆ ಎಂದು ಹೇಳಿದರು.

ಬಳಿಕ ಹೊಯ್ಸಳ ಆಟೋ ಮಾಲೀಕರ ಮತ್ತು ಚಾಲಕರ ಸಂಘದ ಅಧ್ಯಕ್ಷ ಬಿಎನ್ ದೀಪು ಮಾತನಾಡಿ, ರಾಜ್ಯಾದ್ಯಂತ ನಡೆಯುತ್ತಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮುಷ್ಕರದ ಬಿಸಿ ಬೇಲೂರಿನಲ್ಲೂ ಪ್ರಯಾಣಿಕರಿಗೆ ತಟ್ಟಿದ್ದು ಈ ಹಿನ್ನಲೆಯಲ್ಲಿ ನಮ್ಮ ಆಟೋ ಚಾಲಕರ ಮತ್ತು ಮಾಲೀಕರ ಸಂಘದ ವತಿಯಿಂದ ತಾಲ್ಲೂಕಿನ ಎಲ್ಲಿ ಹೆಚ್ಚಿನ ಗ್ರಾಮೀಣ ಪ್ರದೇಶಗಳಲ್ಲಿ ವಾಹನಗಳ ಕೊರತೆ ಕಂಡುಬರುತ್ತಿದೆ ಆ ಭಾಗಗಳಿಗೆ ನಮ್ಮ ಸಂಘದ ವತಿಯಿಂದ ಆಪೆ ಆಟೋಗಳನ್ನು ಕಲ್ಪಿಸಲಾಗಿದೆ. ಆ ಭಾಗಗಳಿಂದ ಬರುವಂತ ಶಾಲಾ ವಿದ್ಯಾರ್ಥಿಗಳಿಗೆ ಯಾವುದೇ ಹಣ ಪಡೆಯದಂತೆ ಉಚಿತವಾಗಿ ಕರೆತರುವ ಕೆಲಸ ಮಾಡಲಾಗುತ್ತಿದೆ ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ವಾಹನದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಈ ಸಂದರ್ಭ ಹೊಯ್ಸಳ ಆಟೋ ಮಾಲೀಕರ ಮತ್ತು ಚಾಲಕರ ಸಂಘದ ಕಾರ್ಯದರ್ಶಿ, ರವೀಶ್, ಧರ್ಮ, ಚೇತನ್, ಮಂಜು ಸ್ಥಳದಲ್ಲಿದ್ದರು.

# ಸಕಲೇಶಪುರ ಬಸ್ ನಿಲ್ದಾಣ ಖಾಲಿ...ಖಾಲಿ..



• ಪ್ರಜೋದಯ ವರದಿ

**ಸಕಲೇಶಪುರ:** ವೇತನ ಪರಿಷ್ಕರಣೆ ಸಹಿತ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ರಾಜ್ಯದ ಸಾರಿಗೆ ನಿಗಮಗಳ ನೌಕರರು ಮಂಗಳವಾರ ಮುಷ್ಕರ ಆರಂಭಿಸಿದ್ದ ಪರಿಣಾಮ ಕೆಎಸ್ಸಾರ್ಟಿಸಿ ಬಸ್ ಸೇವೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ ಸಾರ್ವಜನಿಕರು ವಿದ್ಯಾರ್ಥಿಗಳು, ಕಚೇರಿಗೆ ತೆರಳುವ ನೌಕರರು ಸೇರಿದಂತೆ ಸಾರ್ವಜನಿಕರು ಪರದಾಡುವಂತಾಯಿತು.

ಮುಷ್ಕರದ ಕಾರಣ ಸರ್ಕಾರಿ ಬಸ್‌ಗಳು ರಸ್ತೆಗೆ ಇಳಿಯದೇ ನಿಲ್ಲಿಸಿರುವುದರಿಂದ, ಬೆಳಗಿನ ಜಾವದಿಂದಲೇ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ನಿರಾಶೆ ಅನುಭವಿಸಿದರು. ಬಸ್‌ಗಳಿಲ್ಲದೆ ಎದೆಗುಂದಿರುವ ಪ್ರಯಾಣಿಕರು, ವಿದ್ಯಾರ್ಥಿಗಳು ಹಳೆ ಬಸ್ ನಿಲ್ದಾಣದ ಸಮೀಪ ಮಾಹಿತಿಯಿಲ್ಲದೆ ಕಾದು ನಿಂತಿರುವ ದೃಶ್ಯಗಳು ಕಂಡು ಬಂದವು.

ಖಾಸಗಿ ಬಸ್‌ಗಳು ಹಾಗೂ ಟಾಟಾ ಮ್ಯಾಜಿಕ್, ಟಿಟಿ ಟ್ಯಾಕ್ಸಿ ವಾಹನಗಳು ಮಾತ್ರ ರಸ್ತೆಗಿಳಿದಿದ್ದರೂ, ಅವುಗಳಲ್ಲಿ ಹೆಚ್ಚುವರಿ ದರವನ್ನು ನಿಗದಿಪಡಿಸಲಾಗಿಲ್ಲ ಎಂದು ಖಾಸಗಿ ವಾಹನ ಮಾಲೀಕರು ತಿಳಿಸಿದ್ದಾರೆ. ಕೆಲವು ಖಾಸಗಿ ವಾಹನ ಚಾಲಕರು ಹಾಗೂ ಮಾಲೀಕರು ಸಾರ್ವಜನಿಕರು ನಮ್ಮ ವಾಹನಗಳ ಸೇವೆಯನ್ನು ಬಳಸಿಕೊಳ್ಳಬೇಕು, ನಾವು ಸಹಕಾರ ನೀಡುತ್ತೇವೆ ಎಂದು ತಿಳಿಸಿದರು.

ಆಯಕಟ್ಟಿನ ಜಾಗದಲ್ಲಿ ಯಾವುದೇ ಅನಾಹುತ ಆಗದಂತೆ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

# ಹಳೆಬೀಡಿನಿಂದ ಹೆಚ್ಚಿನ ತರಕಾರಿ ರಫ್ತು

• ಪ್ರಜೋದಯ ವರದಿ

**ಹಳೇಬೀಡು:** ಹಾಸನ ಜಿಲ್ಲೆಯಲ್ಲಿ ಅತಿ ಹೆಚ್ಚು ಹೊರ ಜಿಲ್ಲೆ, ರಾಜ್ಯಗಳಿಗೆ ತರಕಾರಿಗಳನ್ನು ರಫ್ತು ಮಾಡುತ್ತಿರುವ ಹೋಬಳಿ ಎಂದರೇ ಹಳೆಬೀಡು ಮಾತ್ರ ಎಂಬುದು ಶ್ಲಾಘನೀಯ ಎಂದು ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕರು ತಿಳಿಸಿದ್ದಾರೆ.



ಪಟ್ಟಣದ ಸಂತೆ ಮೈದಾನದಲ್ಲಿ ಹಳ್ಳಿ ಸಂತೆ ಕಟ್ಟಡ ಉದ್ಘಾಟನೆ ಮಾಡಿ ಅವರು ಮಾತನಾಡಿ, ಹಳೇಬೀಡು ವಿಶ್ವಪ್ರಸಿದ್ಧ ಪ್ರೇಕ್ಷಣೀಯ ಸ್ಥಳ ಅದರ ಜೊತೆ ಜೊತೆಗೆ ರಾಜ್ಯದ ಹೊರ ರಾಜ್ಯಗಳಿಗೂ ಈ ಭಾಗದಿಂದಲೇ ಅತಿ ಹೆಚ್ಚು ವಿವಿಧ ರೀತಿಯ ತರಕಾರಿಗಳು ರಫ್ತಾಗುತ್ತಿರುವುದು ಹೆಮ್ಮೆಯ ವಿಷಯ. ಈ ಕಾರಣಕ್ಕಾಗಿ ವಾರದ ಸಂತೆಯ ಜೊತೆಗೆ ದೈನಂದಿನ ಸಂತೆಯು ಕೂಡ ಇಲ್ಲಿ ನಡೆಯಲಿ ಎಂಬ ಕಾರಣಕ್ಕೆ ಹಳ್ಳಿ ಸಂತೆಯನ್ನು ಉದ್ಘಾಟನೆ ಮಾಡಿದ್ದು ಇದನ್ನ ಸ್ಥಳೀಯರು ಸುತ್ತಮುತ್ತಲಿನ ಜನರು ಅನುಕೂಲ ಮಾಡಿಕೊಳ್ಳಲು ಹೇಳಿದರು.

ಹಳೇಬೀಡು ಪಟ್ಟಣ ಪಂಚಾಯಿತಿಯಾಗುವ ಎಲ್ಲಾ ಸಾಧ್ಯತೆಗಳು ಮುಂಬರುವ ದಿನಗಳಲ್ಲಿ ಸಾಧ್ಯತೆ ಹೆಚ್ಚಾಗಿದೆ. ಹಳೇಬೀಡಿಗೆ ಎಪಿಎಂಸಿ ಅತ್ಯವಶ್ಯಕವಿದ್ದು ಅದನ್ನ ಮುಂದಿನ ದಿನಗಳಲ್ಲಿ ವ್ಯವಸ್ಥೆ ಮಾಡಿಕೊಡಲು ಬದ್ಧನಾಗಿರುತ್ತೇನೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರೂಪಾಕ್ಷ, ಗ್ರಾಮ ಪಂಚಾಯಿತಿ ಅಧ್ಯಕ್ಷ ಮಧು ಮಾಜಿ ಅಧ್ಯಕ್ಷ ಪ್ರೇಮಣ್ಣ, ಸದಸ್ಯ ಮೋಹನ್, ಗುತ್ತಿಗೆದಾರ ಪರಮೇಶ್, ಪಕ್ಷದ ಮುಖಂಡರಾದ ಪ್ರಸನ್ನ, ಕುಮಾರ್, ರಂಜಿತ್ ಸೇರಿ ಮುಂತಾದವರು ಹಾಜರಿದ್ದರು.

# ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ನೋಡಲ್ ಕೇಂದ್ರ, ವ್ಯಾಪ್ತಿಯ 66/11 ಕೆ.ವಿ. ವಿ.ವಿ ಕೇಂದ್ರ. ಹಳ್ಳಿಮೈಸೂರು ಇಲ್ಲಿ ಎರಡನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ನಿರ್ವಹಿಸಬೇಕಾಗಿರುವುದರಿಂದ ಹಳ್ಳಿಮೈಸೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ಹಳ್ಳಿ ಮೈಸೂರು, ತಾತನಹಳ್ಳಿ, ಕಲ್ಲಹಳ್ಳಿ, ತೇಜೂರು, ಗುಡ್ಡೇನಹಳ್ಳಿ, ಹಾಡ್ಯ, ದೇವರಗುಡ್ಡೇನಹಳ್ಳಿ, ಮಂಗಳವಾಡಿ ಹಾಗು ಸುತ್ತಮುತ್ತಲಿನ ಗ್ರಾಮಗಳಲ್ಲಿ ಆ 6 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಸಹಕರಿಸಬೇಕು ಎಂದು ನೋಡಲ್ ಕೇಂದ್ರದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ಕೋರಿದ್ದಾರೆ.

# ಆರೋಗ್ಯವಂತ ಮಕ್ಕಳು ಪ್ರಗತಿಯ ಸಂಕೇತ

• ಪ್ರಜೋದಯ ವರದಿ

**ಹಾರನಹಳ್ಳಿ:** ಮಹಿಳೆಯರು ಸಾಕಷ್ಟು ಬಾರಿ ತನ್ನ ತೊಂದರೆಗಳನ್ನು ಸೂಕ್ತ ವ್ಯಕ್ತಿಯೊಂದಿಗೆ ಸರಿಯಾಗಿ ತಿಳಿಸದೆ ಬಹಳ ತೊಂದರೆಗೆ ಈಡಾಗುತ್ತಾಳೆ. ಮೊದಲ ಹಂತದಲ್ಲಿಯೇ ಆರೋಗ್ಯ ಸಿಬ್ಬಂದಿ, ಆಶಾ ಅಥವಾ ವೈದ್ಯರೊಂದಿಗೆ ಸಮಾಲೋಚಿಸಿದರೆ ಶೇ. 90ರಷ್ಟು ಕಾಯಿಲೆಗಳನ್ನು ಗುಣಪಡಿಸಬಹುದು, ಅಲ್ಲದೆ ಸರಿಯಾದ ರೀತಿಯಲ್ಲಿ ಸ್ತನ್ಯಪಾನವನ್ನು ಮಾಡಿಸಿದರೆ ಮಕ್ಕಳ ಆರೋಗ್ಯ ಸುಧಾರಣೆ ಆಗುತ್ತದೆ, ಹಾಗೂ ಆರೋಗ್ಯವಂತ ಮಕ್ಕಳು ಪ್ರಗತಿಯ ಸಂಕೇತ ಎಂದು ಇಂಡಿಯಾನಾ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಇಂಪನಾ ತಿಳಿಸಿದರು.

ನಗರದ ಇಂಡಿಯಾನ ಆಸ್ಪತ್ರೆ, ಜಿಲ್ಲಾ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞರ ಸಂಘ, ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಹಾರನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾರನಹಳ್ಳಿಯಲ್ಲಿ ನಡೆದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಕುರಿತು ಮಾತನಾಡಿದ ಅವರು, ಎಲ್ಲಿಯೂ ಕೊಳ್ಳದ, ಕಾಯಿಸದ, ಸರಿಯಾದ ಉಷ್ಣಾಂಶ ಇರುವ, ಸೋಂಕು ರಹಿತವಾದ, ಸರ್ವ ಶ್ರೇಷ್ಠ ಆಹಾರ ಎದೆ ಹಾಲು ಒಂದೇ ಎಂದು ತಿಳಿಸಿದರು.



ಪ್ರಾಸ್ತಾವಿಕವಾಗಿ ಮಾತನಾಡಿದ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾರನಹಳ್ಳಿಯ ವೈದ್ಯಾಧಿಕಾರಿ ಡಾ. ಯಶವಂತ್ ನಮ್ಮ ಆಸ್ಪತ್ರೆಯಲ್ಲಿ ವಾರಕ್ಕೊಮ್ಮೆ ಸ್ತ್ರೀರೋಗ ತಜ್ಞರಾದ ಡಾ. ಇಂಪನ ಭೇಟಿ ನೀಡಿ ಇಲ್ಲಿಯ ಮಹಿಳೆಯರ ಆರೋಗ್ಯ ತಪಾಸಣೆ ಮಾಡುವುದರಿಂದ ಮಹಿಳಾ ಆರೋಗ್ಯದೆಡೆಗೆ ಒಂದು ದಿಟ್ಟ ಹೆಜ್ಜೆ ಇಟ್ಟಂತೆ ಆಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಬಿ.ಪರಮೇಶ್ ಮಾತನಾಡಿ, ಅದೆಷ್ಟೋ ಬಾರಿ ಮಾತ್ರೆಗಿಂತ ಮಾತು ಕೆಲಸ ಮಾಡುತ್ತವೆ. ನಾವು ತಿನ್ನುವ ಆಹಾರದ ಬಗ್ಗೆಯೂ ಸಾಕಷ್ಟು ಮಾಹಿತಿಯನ್ನು ತಿಳಿದುಕೊಳ್ಳಬೇಕಾಗಿದೆ. ಇಂತಹ ಸಭೆ ಸಮಾರಂಭಗಳಿಗೆ ಮಹಿಳೆಯರು ಬಂದರೆ, ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು ಎಂದು ತಿಳಿಸಿದರು.

ಇಂಡಿಯಾನಾ ಆಸ್ಪತ್ರೆಯ ಮಾರ್ಕೆಟಿಂಗ್ ಹೆಡ್ ರಂಗಸ್ವಾಮಿ ಮಾತನಾಡಿ, ಇಂಡಿಯಾನಾ ಆಸ್ಪತ್ರೆಯ ಸಮಾಜ ಸೇವೆ ಬಗ್ಗೆ ತಿಳಿಸಿದರು.

ಪಿ.ಆರ್.ಓ. ಕೇಶವಮೂರ್ತಿ, ಆಸ್ಪತ್ರೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು. ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞರ ಸಂಘದ ವತಿಯಿಂದ ಸುಮಾರು ನಲವತ್ತು ಮಕ್ಕಳಿಗೆ ಸ್ವೆಟರ್‌ಗಳನ್ನು ವಿತರಿಸಲಾಯಿತು.

# ಕೊಳೆರೋಗ ಹತೋಟಿಗೆ ಬೆಳೆ ಪರಿವರ್ತನೆ ಮಾಡಿ

• ಪ್ರಜೋದಯ ವರದಿ

**ಹಾಸನ:** ಶುಂಠಿ ಬೆಳೆಯಲ್ಲಿ ಕಂಡು ಬರುವ ಕೊಳೆರೋಗ ಹತೋಟಿಗೆ ಬೆಳೆ ಪರಿವರ್ತನೆ ಮಾಡಬೇಕು. ಜಮೀನಿನ ಆಳವಾದ ಉಳುಮೆ, ಕೊಟ್ಟಿಗೆ ಗೊಬ್ಬರದೊಂದಿಗೆ ಜೈವಿಕ ಗೊಬ್ಬರ ಮತ್ತು ಬೇವಿನ ಹಿಂಡಿ ಹಾಕಬೇಕಿರುವುದು ಉತ್ತಮ ಕ್ರಮವಾಗಿದೆ ಎಂದು ಕಾರೆಕೆರೆ ಕೃಷಿ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕಿ ಡಾ.ಪೂಜಾ ಎಸ್.ಪಟೇಲ್ ಅವರು ರೈತರಿಗೆ ಸಲಹೆ ನೀಡಿದರು.



ತಾಲ್ಲೂಕಿನ ಹಂಪನಹಳ್ಳಿಯಲ್ಲಿ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಹಮ್ಮಿಕೊಂಡಿದ್ದ ರೋಗ ನಿರ್ಣಾಯಕ ಭೇಟಿ ಕಾರ್ಯಕ್ರಮದಲ್ಲಿ ಶುಂಠಿಯಲ್ಲಿ ಬರುವ ಕೊಳೆ ರೋಗದ ಬಗ್ಗೆ ವಿವರಣೆ ನೀಡಿದರು.

ಕೊಳೆ ರೋಗವು ಶಿಲೀಂಧ್ರದಿಂದ ಉಂಟಾಗುತ್ತದೆ. ಮೊದಲಿಗೆ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತದೆ ನಂತರ ಶುಂಠಿ ಗಡ್ಡೆ ಕೊಳೆಯುತ್ತದೆ.ಈ ರೋಗವನ್ನು ನಿಯಂತ್ರಿಸಲು ರೋಗ ಬಂದಿರುವ ಗಿಡಗಳನ್ನು ಕಿತ್ತು ದೂರದಲ್ಲಿ ಸುಡಬೇಕು ಹಾಗು ಮ್ಯಾಂಕೋಜೆಬ್ ಸಿಂಪಡಿಸಬೇಕು ಮತ್ತು ಸಮಗ್ರ ರೋಗ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿಕೊಟ್ಟರು. ವಿದ್ಯಾರ್ಥಿಗಳು, ರೈತರು ಹಾಜರಿದ್ದರು.

# ಆ.13 ಕ್ಕೆ ಕೌನ್ಸಿಲಿಂಗ್

ಹೊಳೆನರಸೀಪುರ: ತಾಲ್ಲೂಕಿನ ತಟ್ಟೆಕೆರೆ ಸರ್ಕಾರಿ ಆದರ್ಶ ಶಾಲೆಯ 6 ನೇ ತರಗತಿ ಪ್ರವೇಶ ಸಂಬಂಧ 4 ನೇ ಸುತ್ತಿನ ಪ್ರಕ್ರಿಯೆ ನಡೆಸಲಾಗಿದ್ದು, ಹಲವು ವಿದ್ಯಾರ್ಥಿ ಪೋಷಕರ ಮೊಬೈಲ್‌ಗೆ ಸಂದೇಶ ಬಂದಿರುತ್ತದೆ. ಸೂಕ್ತ ಪರಿಶೀಲಿಸಿಕೊಂಡು ದಾಖಲಿಸಿಕೊಳ್ಳುವಂತೆ ಮುಖ್ಯ ಶಿಕ್ಷಕರು ತಿಳಿಸಿದ್ದಾರೆ.

ವರ್ಗಾವಾರು ಪ್ರವೇಶ ಪ್ರಕ್ರಿಯೆಗಳು ನಡೆಯಲಿದೆ. ಸಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಆ,11 ಮತ್ತು 12 ರಂದು ಮೀಸಲಾತಿಯಡಿ ಅರ್ಜಿ ಸಲ್ಲಿಸಲಾಗಿರುವ ವಿದ್ಯಾರ್ಥಿಗಳಿಗೆ ಆ.13 ಮತ್ತು 14 ರಂದು ಕೌನ್ಸಿಲಿಂಗ್ ನಡೆಸಲಾಗುವುದು. ಅಗತ್ಯ ದಾಖಲೆಯೊಂದಿಗೆ ಅರ್ಹ ವಿದ್ಯಾರ್ಥಿ ಜತೆಗೆ ಪೋಷಕರು ಭಾಗವಹಿಸಬಹುದು. ನಿಗಧಿತ ದಿನಾಂಕಗಳಲ್ಲಿ ಬಾರದೇ ಗೈರಾದವರಿಗೆ ಮತ್ತೆ ಅವಕಾಶ ನೀಡಲಾಗುವುದಿಲ್ಲ ಎಂದು ಪ್ರಕಟಣೆಗೆ ಕೋರಿರುವ ಅವರು ತಿಳಿಸಿದ್ದಾರೆ.

# ಭಾರತ ವ್ಯಾಪಾರ ಪಾಲುದಾರಿಕೆಯ ರಾಷ್ಟ್ರವಲ್ಲ

• ಪ್ರಜೋದಯ ವರದಿ

**ನ್ಯೂಯಾರ್ಕ್:** ರಷ್ಯಾದಿಂದ ತೈಲ ಖರೀದಿ ಸ್ಥಗಿತಕ್ಕೆ ಮುಂದಾಗದ ಭಾರತದ ವಿರುದ್ಧ ಮತ್ತೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡಿರುವ ಅವರು, ಮುಂದಿನ 24 ಗಂಟೆ ಒಳಗೆ ಭಾರತಕ್ಕೆ ಮತ್ತಷ್ಟು ಸುಂಕ ವಿಧಿಸಲಾಗುವುದು. ಭಾರತ ಒಳ್ಳೆಯ ವ್ಯಾಪಾರ ಪಾಲುದಾರರಾಗಿಲ್ಲ. ಅವರು ನಮ್ಮೊಂದಿಗೆ ಸಾಕಷ್ಟು ವ್ಯಾಪಾರ ಮಾಡುತ್ತಾರೆ. ನಾವು ಅವರೊಂದಿಗೆ ವ್ಯಾಪಾರ ಮಾಡುವುದಿಲ್ಲ. ಆದ್ದರಿಂದ ನಾವು ಶೇ. 25 ರಷ್ಟು ಸುಂಕ ವಿಧಿಸಿದ್ದೇವೆ ಎಂದಿದ್ದಾರೆ.



ಭಾರತದವರು ರಷ್ಯಾದಿಂದ ತೈಲ ಖರೀದಿಸುತ್ತಿದ್ದಾರೆ. ಆ ಮೂಲಕ ಯುದ್ಧ ತಂತ್ರಕ್ಕೆ ಉತ್ತೇಜನ ನೀಡುತ್ತಿದ್ದಾರೆಂದು ಟ್ರಂಪ್ ಅವರು ಆರೋಪಿಸಿದ್ದಾರೆ.

ಕಳೆದ ವಾರ ಭಾರತ ಮತ್ತು ರಷ್ಯಾದ ಆರ್ಥಿಕತೆಗಳನ್ನು ಸತ್ತ ಆರ್ಥಿಕತೆಗಳು ಎಂದು ಕರೆದಿದ್ದ ಟ್ರಂಪ್, ತದನಂತರ ಭಾರತದ ವಿರುದ್ಧ ಮತ್ತಷ್ಟು ಟೀಕೆಗಳನ್ನು ಮಾಡುತ್ತಲೇ ಇದ್ದಾರೆ. ಭಾರತೀಯ ಸರಕುಗಳ ಮೇಲೆ ಶೇ. 25 ರಷ್ಟು ಸುಂಕ ವಿಧಿಸಿದ ನಂತರ ಇದೀಗ ಹೆಚ್ಚುವರಿ ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಭಾರತ ಬೃಹತ್ ಪ್ರಮಾಣದ ರಷ್ಯಾದ ತೈಲವನ್ನು ಖರೀದಿಸುತ್ತಿದೆಯೆಂದು ಅವರು ಉಲ್ಲೇಖಿಸಿದ್ದಾರೆ.

ಭಾರತವು ರಷ್ಯಾದ ತೈಲವನ್ನು ದೊಡ್ಡ ಲಾಭಕ್ಕಾಗಿ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದರು. ರಷ್ಯಾದ ಯುದ್ಧದಿಂದ ಉಕ್ರೇನ್‌ನಲ್ಲಿ ಎಷ್ಟು ಜನರು ಕೊಲ್ಲಲ್ಪಡುತ್ತಿದ್ದಾರೆ ಎಂಬುದಕ್ಕೆ ಭಾರತದವರು ತಲೆಕೆಡಿಸಿಕೊಳ್ಳುತ್ತಿಲ್ಲ. ಈ ಕಾರಣದಿಂದಾಗಿ ಭಾರತ ಅಮೇರಿಕಾಕ್ಕೆ ಪಾವತಿಸುವ ಸುಂಕವನ್ನು ಗಣನೀಯವಾಗಿ ಹೆಚ್ಚಿಸುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

# 300ಕ್ಕೂ ಹೆಚ್ಚು ಮಕ್ಕಳಿಗೆ ಆರೋಗ್ಯ ತಪಾಸಣೆ

• ಪ್ರಜೋದಯ ವರದಿ

**ಹಾಸನ:** ನಗರದ ಬಿ. ಕಾಟಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣೆ ಶಿಬಿರದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. 20ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು.



ಬಿ. ಕಾಟಿಹಳ್ಳಿ ಶ್ರೀ ಜೋಡಿ ಆಂಜನೇಯ ಸ್ವಾಮಿ ಸೇವಾ ಸಮಿತಿ, ರೋಟರಿ ಕ್ಲಬ್ ಆಫ್ ಹಾಸನ್ ಸನ್ ರೈಸ್, ಹಾಸನಾಂಬ ಲಯನ್ಸ್ ಕ್ಲಬ್, ಪುನರ್ಜೀವ ಸ್ವಯಂ ಸೇವಾ ಸಂಸ್ಥೆ, ಚನ್ನರಾಯಪಟ್ಟಣ ಸ್ವಯಂ ಪ್ರೇರಿತ ರಕ್ತ ಕೇಂದ್ರದಿಂದ ಹುತಾತ್ಮ ರೈತರ ಸ್ಮರಣಾರ್ಥ ಮೈಸೂರಿನ ನಾರಾಯಣ ಆಸ್ಪತ್ರೆ ಸಹಕಾರದಲ್ಲಿ ಆರೋಗ್ಯ ಉಚಿತ ತಪಾಸಣೆ ಹಾಗು ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಎಸ್. ಚಂದ್ರಶೇಖರ್, ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಡಿ.ವಜ್ರಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಕೆ. ಮೋಹನ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ರಂಗನಾಥ, ರೋಟರಿ ಜಿಲ್ಲೆ 3182 ವಲಯ 9ರ ಸಹಾಯಕ ಗವರ್ನರ್ ರೋ. ಜೆ.ಎನ್. ಮಂಜುನಾಥ್, ಲಲಿತ್ ಕುಮಾರ್, ಭರತ್ ಕುಮಾರ್, ದಾಕ್ಷಾಯಿಣಿ, ಕಾರ್ಯದರ್ಶಿ ಕೆ.ಎಸ್. ಯೋಗೇಶ್, ಶಿಕ್ಷಕಿ, ದೀಪು, ಬೊಮ್ಮೇಗೌಡ, ಹರೀಶ್, ಲಲಿತ್‌ಕುಮಾರ್, ಉದಯಶಂಕರ್ ಮತ್ತಿತರರಿದ್ದರು.

# ರಾಮದೂತ ಹಿಂದೂ ಮಹಾಗಣಪತಿ ಸಮಿತಿಯಿಂದ ಜಾಗೃತಿ

• ಪ್ರಜೋದಯ ವರದಿ

**ಸಕಲೇಶಪುರ:** ಗಣಪತಿ ಪ್ರತಿಷ್ಠಾಪನೆ ಮೂಲಕ ಹಿಂದೂ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿರುವ ರಾಮದೂತ ಹಿಂದೂ ಮಹಾಗಣಪತಿ ಸಮಿತಿ ನಿರಂತರವಾಗಿ ಶ್ರದ್ಧಾ ಮತ್ತು ಭಕ್ತಿಯಿಂದ ಈ ಕಾರ್ಯವನ್ನು ಮಾಡುತ್ತ ಬಂದಿದೆ ಎಂದು ಕೌಶಿಕ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಳೆದ 8 ವರ್ಷಗಳಿಂದ ರಾಮದೂತ ಹಿಂದೂ ಮಹಾಗಣಪತಿ ಸಮಿತಿಯವರು ಸಕಲೇಶಪುರದ ಗುರುವೇಗೌಡ ಕಲ್ಯಾಣ ಮಂಟಪ ಆವರಣದಲ್ಲಿರುವ ಕಮಲ್ ದೇವ್ ಕ್ಲಿನಿಕ್ ಮುಂಭಾಗದಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಬಾಲ ಗಂಗಾಧರ ತಿಲಕರಂತಹವರು ಧಾರ್ಮಿಕ ಶಕ್ತಿಯನ್ನು ಬಲಗೊಳಿಸಿ ಸ್ವಾತಂತ್ರ ಚಳುವಳಿಗೆ ಪ್ರೇರಣೆಯಾದಂತೆ,



ಇಂದು ಸಮಾಜದಲ್ಲಿ ನಡೆಯುತ್ತಿರುವ ಅಜಾಗರೂಕತೆ, ಹಿಂದೂಗಳ ಮೇಲಿನ ದೌರ್ಜನ್ಯ, ಕೊಲೆ, ಲವ್ ಜಿಹಾದ್, ಲ್ಯಾಂಡ್ ಜಿಹಾದ್ ನಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಂಕಲ್ಪಬದ್ಧರಾಗಿ ರಾಮದೂತ ಹಿಂದೂ ಮಹಾಗಣಪತಿ ಸಮಿತಿಯವರು ಕಳೆದ 8 ವರ್ಷಗಳಿಂದ ಗಣಪತಿ ಪ್ರತಿಷ್ಠಾಪನೆ ಮೂಲಕ ಜನಜಾಗೃತಿ ಮೂಡಿಸುತ್ತಿದ್ದಾರೆ ಎಂದು ವಿವರಿಸಿದರು.

ರಾಮದೂತ ಮಹಾಗಣಪತಿಯ ಸಂಚಾಲಕರಾದ ಪ್ರದೀಪ್ ಪೂಜಾರಿ ಅವರು ಮುಂದಾಗಿ ಮಾತನಾಡಿ, ಈ ಬಾರಿಯ ಕಾರ್ಯಕ್ರಮದಲ್ಲಿ ಸಕಲೇಶಪುರ ತಾಲ್ಲೂಕಿನ ಎಲ್ಲ ಗಣಪತಿ ಸಮಿತಿಗಳಿಗೆ ವಿನಂತಿಯೆಂದರೆ ದಯವಿಟ್ಟು ದಿನಾಂಕ 31.08.2025, ಭಾನುವಾರದಂದು ತಮ್ಮ ತಮ್ಮ ಗ್ರಾಮ ಅಥವಾ ವಾರ್ಡ್‌ಗಳಲ್ಲಿ ಗಣಪತಿ ಮೂರ್ತಿಗಳನ್ನು ವಿಸರ್ಜನೆ ಮಾಡ ಬಾರದು. ಬದಲಿಗೆ, ನಿಮ್ಮ ಕುಟುಂಬದೊಂದಿಗೆ ಬೃಹತ್ ಶೋಭಾ ಯಾತ್ರೆಯಲ್ಲಿ ಭಾಗವಹಿಸಿ ಮೆರವಣಿಗೆಯ ಶೋಭೆ ಹೆಚ್ಚಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡುತ್ತೇವೆ ಎಂದರು.

ರಾಮದೂತ ಹಿಂದೂ ಮಹಾಗಣಪತಿ ವಿಸರ್ಜನಾ ಕಾರ್ಯಕ್ರಮವು ರಾಜ್ಯಮಟ್ಟದಲ್ಲಿಯೇ ಮಾದರಿಯಾಗಬೇಕೆಂಬ ನಿಟ್ಟಿನಲ್ಲಿ, ಸಕಲೇಶಪುರದ ಸಮಸ್ತ ಹಿಂದೂ ಸಮಾಜದವರ ಸಹಕಾರ ಬೇಕಾಗಿದೆ ಎಂದೂ ಹೇಳಿದರು.

ವಿವಿಧ ಕಲಾತಂಡಗಳು ಹಾಗೂ ಭಜನೆ ತಂಡಗಳ ಜೊತೆ ಪ್ರಮುಖ ಬೀದಿಗಳಲ್ಲಿ ಬೃಹತ್ ಶೋಭಾ ಯಾತ್ರೆ, ಬಳಿಕ ಪವಿತ್ರ ಹೇಮಾವತಿ ನದಿಯಲ್ಲಿ ಗಣಪತಿ ಮೂರ್ತಿ ವಿಸರ್ಜನೆ ಕಾರ್ಯಕ್ರಮ ಇರುತ್ತದೆ ಎಂದು ಹೇಳಿದರು.

ಈ ಎಲ್ಲಾ ಕಾರ್ಯಕ್ರಮಗಳಿಗೆ ಹಿಂದೂ ಸಮಾಜದ ಎಲ್ಲ ಸಾರ್ವಜನಿಕರು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮಾಧ್ಯಮದ ಮೂಲಕ ವಿನಂತಿಸುತ್ತೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಮದೂತ ಹಿಂದೂ ಮಹಾಗಣಪತಿ ಸಮಿತಿಯ ಕಬ್ಬಿನಗದ್ದೆ ಮಂಜುನಾಥ್ ಹಾಗೂ ಶೇಖರ್ ಉಪಸ್ಥಿತರಿದ್ದರು.

# ನಟ ಸಂತೋಷ್ ಬಾಲರಾಜ್ ವಿಧಿವಶ

• ಪ್ರಜೋದಯ ವರದಿ



**ಬೆಂಗಳೂರು:** ನಿರ್ದೇಶಕ ಆನೇಕಲ್ ಬಾಲರಾಜ್ ಅವರ ಪುತ್ರ ಸಂತೋಷ್ (38) ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ. ಕೆಲ ದಿನಗಳ ಹಿಂದೆ ಜಾಂಡೀಸ್ ರೋಗಕ್ಕೆ ತುತ್ತಾಗಿದ್ದ ಸಂತೋಷ್ ಅವರು, ಖಾಸಗಿ ಆಸ್ಪತ್ರೆಯೊಂದರಲ್ಲಿ ಹಲವು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಗಣಪ, ಕರಿಯ-2, ಕೆಂಪ, ಬರ್ಕ್ಲೀ ಚಿತ್ರಗಳಲ್ಲಿ ನಟಿಸಿದ್ದ ಸಂತೋಷ್ ಅಭಿನಯದ ಸತ್ಯ ಚಿತ್ರ ಇನ್ನೂ ತೆರೆ ಕಾಣಬೇಕಾಗಿತ್ತು. ಎಲ್ಲರ ಜತೆ ಸ್ನೇಹಮಯ ವ್ಯಕ್ತಿತ್ವ ಹೊಂದಿದ್ದ ಸಂತೋಷ್, ಒಂದೂವರೆ ವರ್ಷದ ಹಿಂದಷ್ಟೇ ತಂದೆಯನ್ನು ಕಳೆದುಕೊಂಡಿದ್ದರು.

# ಸಾರಿಗೆ ನೌಕರರ ಮುಷ್ಕರಕ್ಕೆ ಚ.ರಾ.ಪಟ್ಟಣದಲ್ಲಿ ಉತ್ತಮ ಪ್ರತಿಕ್ರಿಯೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ನೌಕರರ ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯಿಂದ ಕರೆ ನೀಡಿದ್ದ ರಾಜ್ಯವ್ಯಾಪ್ತಿ ಮುಷ್ಕರಕ್ಕೆ ತಾಲ್ಲೂಕಿನಲ್ಲಿ ಉತ್ತಮ ಬೆಂಬಲ ವ್ಯಕ್ತವಾಯಿತು.



ತಾಲ್ಲೂಕು ಘಟಕದ ಬಹುತೇಕ ನೌಕರರು ಕರ್ತವ್ಯಕ್ಕೆ ಗೈರಾಗಿದ್ದ ಕಾರಣ ಬೆಳಗ್ಗೆ 7 ಘಂಟೆಯಿಂದಲೇ ಪಟ್ಟಣದ ಬಸ್‌ನಿಲ್ದಾಣ ಬಿಕೋ ಎನ್ನುತ್ತಿತ್ತು. ಗ್ರಾಮೀಣ ಪ್ರದೇಶ, ಜಿಲ್ಲೆ, ಅಂತರ ಜಿಲ್ಲೆ, ಅಂತರ ರಾಜ್ಯಗಳಿಗೆ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಸಾರಿಗೆ ಮುಷ್ಕರ ಹಿನ್ನೆಲೆ ಜಿಲ್ಲೆಯಲ್ಲಿ ಸರ್ಕಾರಿ ಬಸ್‌ಗಳು ರಸ್ತೆಗಿಳಿಯದ ಕಾರಣ ಪ್ರಯಾಣಿಕರು ಪರದಾಡುತ್ತಿದ್ದರೆ, ಗ್ರಾಮೀಣ ಭಾಗದಿಂದ ನಗರ ಪ್ರದೇಶಗಳಿಗೆ ಶಾಲಾ, ಕಾಲೇಜು ಉದ್ಯೋಗ ಸೇರಿ ನಾನಾ ಕಾರಣಗಳಿಂದ ಬರುವ ವಿದ್ಯಾರ್ಥಿಗಳು, ಸಾರ್ವಜನಿಕರು ಬಸ್‌ಗಳಿಲ್ಲದೆ ಪರದಾಡಿದರು.

ಬಂದ್ ಬಿಸಿ ಭಾರೀ ಪ್ರಮಾಣದಲ್ಲಿ ತಟ್ಟಿದ್ದು, ಒಂದೇ ಒಂದು ಬಸ್ ಸಹ ರಸ್ತೆಗೆ ಇಳಿಯದ ಹಿನ್ನಲೆ ಆಟೋ, ಟೆಂಪೋ ಖಾಸಗಿ ಬಸ್‌ಗಳ ಮೂಲಕ ದುಪ್ಪಟ್ಟು ಹಣ ನೀಡಿ ಜನ ಪ್ರಯಾಣಿಸುವ ಸ್ಥಿತಿ ಎದುರಾಗಿದೆ. ದೂರದ ಊರುಗಳಿಗೆ ತೆರಳುವ ಪ್ರಯಾಣಿಕರು ರೈಲ್ವೆಗಳ ಮೊರೆ ಹೋಗುವ ದೃಶ್ಯ ಕಂಡು ಬಂದಿತು. ಸಾರಿಗೆ ನೌಕರರ ಮುಷ್ಕರದ ನಡುವೆಯೂ ಪಟ್ಟಣದಲ್ಲಿ ಖಾಸಗಿ ಬಸ್‌ಗಳು ಸಂಚಾರ ಆರಂಭಿಸಿವೆ. ಬೆಳಿಗ್ಗೆಯಿಂದ ನಿಲ್ದಾಣದ ಹೊರ ಭಾಗದಲ್ಲಿ ನಿಲುಗಡೆ ಮಾಡಲಾಗಿದ್ದ ಬಸ್‌ಗಳನ್ನು ಮಧ್ಯಾಹ್ನ ಒಂದು ಗಂಟೆಯ ನಂತರ ಸಾರಿಗೆ ಬಸ್ ನಿಲ್ದಾಣದಿಂದಲೇ ಬಸ್ ಓಡಾಟ ಆರಂಭಿಸಲಾಯಿತು. ಖಾಸಗಿ ಮ್ಯಾಕ್ಸಿ ಕ್ಯಾಬ್, ಟೆಂಪೋ ಖಾಸಗಿ ಬಸ್‌ಗಳನ್ನು ಬಸ್ ನಿಲ್ದಾಣದಲ್ಲಿ ನಿಲ್ಲಿಸಲಾಗಿದೆ. ಪಟ್ಟಣದಿಂದ ಹಲವೆಡೆ ಖಾಸಗಿ ವಾಹನಗಳ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸುವ ಮೂಲಕ ಖಾಸಗಿ ಬಸ್‌ಗಳ ಸಂಚಾರ ಆರಂಭವಾಗಿತ್ತು.

ತಾಲ್ಲೂಕಿನ ಸುತ್ತಮುತ್ತಲೂ ಆಟೋಗಳು ಓಡಾಡುತ್ತಿವೆ. ಪ್ರಯಾಣಿಕರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು, ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಬಸ್ ಸಂಚಾರ ಆರಂಭಿಸಲಾಗಿತ್ತು. ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕಾರ್ಯಕರ್ತರು ಕರೆಕೊಟ್ಟಿದ್ದ ಸಾರಿಗೆ ನೌಕರರ ಮುಷ್ಕರಕ್ಕೆ ಪಟ್ಟಣದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳು, ರೈತಸಂಘ ಬೆಂಬಲ ವ್ಯಕ್ತಪಡಿಸಿದವು.

ನಿವೃತ್ತ ಸಾರಿಗೆ ನೌಕರ, ಸಾರಿಗೆ ನೌಕರರ ಸಂಘದ ಮಾಜಿ ಮುಖಂಡ ರಂಗಸ್ವಾಮಿ ಮಾತನಾಡಿ, ಹಗಲು ಇರುಳು ಎನ್ನದೆ ಮನೆ ಮಕ್ಕಳು, ಮಡದಿಯನ್ನು ತೊರೆದು ಅಗತ್ಯ ಸೇವೆ ಎಂದು ಪರಿಗಣಿಸಿ ಕರ್ತವ್ಯ ನಿರ್ವಹಿಸುವ ಸಾರಿಗೆ ನೌಕರರ ಕನಿಷ್ಠ ಸೌಲಭ್ಯವನ್ನು ಈಡೇರಿಸಲಾಗದ ಸರ್ಕಾರಕ್ಕೆ ನಮ್ಮ ಧಿಕ್ಕಾರ ಎಂದರು.

ಭ್ರಷ್ಟಾಚಾರ ವಿರೋಧಿ ಆಂದೋಲನ ವೇದಿಕೆಯ ಸಂಚಾಲಕ ರಾಮಚಂದ್ರ ಅವರು ಮಾತನಾಡಿ, ಸಾರಿಗೆ ನೌಕರರ ಮುಷ್ಕರಕ್ಕೆ ಜನಸಾಮಾನ್ಯರು ಬೆಂಬಲವನ್ನ ವ್ಯಕ್ತಪಡಿಸುವ ಅವಶ್ಯಕತೆ ಇದೆ. ಸಾರಿಗೆ ನೌಕರರ ಪರವಾಗಿ ನಿಲ್ಲಬೇಕು ಎಂಬ ಒತ್ತಾಸೆಯೊಂದಿಗೆ ಪಟ್ಟಣದಲ್ಲಿ ತಾಲ್ಲೂಕು ತೆಂಗು ಬೆಳೆಗಾರರ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಭ್ರಷ್ಟಾಚಾರ ವಿರೋಧಿ ಆಂದೋಲನ ವೇದಿಕೆ, ದಲಿತ ಸಂಘಟನೆಗಳು ಸೇರಿ ಹಲವು ಸಂಘಟನೆಗಳು ಅವರ ಬೆಂಬಲಕ್ಕೆ ನಿಂತಿವೆ ಎಂದರು.

ಮುಖಂಡರಾದ ಕರಿಯಪ್ಪ, ತೇಜಸ್ಸು, ಚಂದ್ರಹಾಸ, ಮಧುಸೂಧನ, ಮಂಜೇಗೌಡ, ರಾಮು, ಲೋಕೇಶ್, ರವಿ ಗೌಡಯ್ಯ ಇನ್ನಿತರರು ಇದ್ದರು.

# ಸ್ವಚ್ಛತೆ ಕಾಣದ ಚರಂಡಿ: ಸಾರ್ವಜನಿಕರ ಆಕ್ರೋಶ

• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಜಾವಗಲ್ ವೃತ್ತದಿಂದ ಭೈರವೇಶ್ವರಸ್ವಾಮಿ ದೇವಾಲಯದ ತನಕ ಇರುವ ಚರಂಡಿ ಕಸ ತುಂಬಿ ಕೊಳಚೆ ನೀರು ಸರಾಗವಾಗಿ ಹರಿಯದೆ ತ್ಯಾಜ್ಯ ವಸ್ತುಗಳಿಂದ ತುಂಬಿ ಕೆಟ್ಟ ವಾಸನೆ ಬರುತ್ತಿದ್ದು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಅನೇಕ ಬಾರಿ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲವೆಂದು 4 ನೇ ವಾರ್ಡ್ ಜನರು ಗ್ರಾಪಂ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಅರಸೀಕೆರೆ- ಹಾಸನ ಮುಖ್ಯ ರಸ್ತೆ ಹಾರನಹಳ್ಳಿ ವ್ಯಾಪ್ತಿಯಲ್ಲಿ ದೊಡ್ಡ ಚರಂಡಿ ಮಾಡಿದ್ದು ಇಕ್ಕೆಲಗಳಲ್ಲಿ ಚರಂಡಿ ಮಾಡಿದ್ದು, ಗ್ರಾಮದ ಮಳೆ ನೀರು ಚರಂಡಿ ನೀರು ಈ ಚರಂಡಿಯಲ್ಲಿ ಹೋಗಬೇಕಾಗಿದ್ದು ಕಸ ತುಂಬಿ ಗಿಡ ಬೆಳೆದು ನಿಂತಿದೆ. ಇಲ್ಲಿ ಶಾಲಾ- ಕಾಲೇಜು ಇತರ ವಾಣಿಜ್ಯ ಅಂಗಡಿಗೆ ಬರುವ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ವಾಸನೆ ತಾಳಲಾರದೆ ಮೂಗು ಮುಚ್ಚಿಕೊಂಡು ತಿರುಗುವ ಸ್ಥಿತಿ ನಿರ್ಮಾಣವಾಗಿದೆ.

ಚರಂಡಿ ನೀರು ಸರಾಗವಾಗಿ ಹರಿಯದೆ ಸೊಳ್ಳೆಗಳ ಆವಾಸ ಸ್ಥಾನದಿಂದ ಅನೇಕ ರೋಗಗಳು ಹರಡುವ ಮುನ್ಸೂಚನೆ ಕಾಣುತ್ತಿದೆ. ಈ ಬಗ್ಗೆ ಆರೋಗ್ಯ ಇಲಾಖೆ, ಗ್ರಾಮ ಪಂಚಾಯತಿ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತ್ತಿದ್ದಾರೆ. ಕಂದಾಯ ಕಟ್ಟಬೇಕು ಸ್ವಚ್ಛತೆ ಮಾತ್ರ ಬೇಡ. ಇದು ಇಲ್ಲಿಯ ಗ್ರಾಪಂನ ವಾಸ್ತವ ಸ್ಥಿತಿಯಾಗಿದೆ ಎಂದು ಗ್ರಾಮದ ಸಿದ್ದೇಶ್ ಆಕ್ರೋಶ ವ್ಯಕ್ತಡಿಸಿದ್ದಾರೆ.

ಚುನಾಯಿತ ಜನಪ್ರತಿನಿಧಿಗಳು ಇಂತಹ ಅವ್ಯವಸ್ಥೆ ಕಂಡರು ಕಾಣದಂತೆ ತಿರುಗುತ್ತಿದ್ದಾರೆಂದು 4 ನೇ ವಾರ್ಡ್ ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದ್ದಾರಲ್ಲದೆ, ಈ ಬಗ್ಗೆ ತಾಪಂ ಇಓ ಗಮನಕ್ಕೆ ತಂದರೂ ಸಾರ್ವಜನಿಕರಿಗೆ ಸ್ಪಂದಿಸದ ಅಧಿಕಾರಿಯಾಗಿದ್ದಾರೆಂದು ಗ್ರಾಮಸ್ಥರು ದೂರಿದ್ದಾರೆ.

ತಕ್ಷಣ ರಾಜ ಕಾಲುವೆ ಚರಂಡಿ ಸ್ವಚ್ಛತೆ ಮಾಡದಿದ್ದರೆ ಗ್ರಾಪಂ ಹಾಗೂ ಅರಸೀಕೆರೆ ತಾಪಂ ಕಾರ್ಯಾಲಯದ ಮುಂದೆ ಉಗ್ರ ಪ್ರತಿಭಟನೆ ಮಾಡುವುದಾಗಿ ಹಾರನಹಳ್ಳಿಯ 4ನೇ ವಾರ್ಡ್‌ನ ಮಹಿಳೆಯರು ಮತ್ತು ಹಲವು ಸಂಘ- ಸಂಸ್ಥೆಗಳ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

